## ಅಧ್ಯಾಯ 5

# ಏಳು ಮುದ್ರೆಗಳುಳ್ಳ ಸುರುಳಿ

ಶಾಸ್ತ್ರಗಳು ತನ್ನ ಕುರಿತು ಸಾಕ್ಷಿ ಹೇಳುತ್ತವೆಂಬುದಾಗಿ ಯೇಸುವು ಹೇಳಿದನು (ಯೋಹಾನ 5:39). ಅದು ಹಳೆಯ ಒಡಂಬಡಿಕೆಯ ವಿಷಯದಲ್ಲಿ ಮತ್ತು ಹೊಸ ಒಡಂಬಡಿಕೆಯ ವಿಷಯದಲ್ಲಿ ಸಹ ಸತ್ಯವಾದದ್ದು - ಪ್ರಕಟನೆ ಪುಸ್ತಕವು ಸೇರಿದಂತೆ. ಯೇಸು ಪ್ರಕಟನೆ ಪುಸ್ತಕದ "ಮುಖ್ಯ ವಿಷಯ"[1] ಆಗಿದ್ದಾನೆ. Ray Summersನು ಪ್ರಕಟನೆ ಪುಸ್ತಕದ ಮೇಲಿನ ವ್ಯಾಖ್ಯಾನ ಪುಸ್ತಕಕ್ಕೆ *ಕುರಿಯಾದಾತನು ಯೋಗ್ಯನು* ಎಂಬ ಶಿರ್ಷೀಕೆಯನ್ನು ಕೊಟ್ಟನು. ಪರಿಚಯ ಭಾಗದಲ್ಲಿ, ಆತನು ಅದಕ್ಕೆ ಕಾರಣವನ್ನು ವಿವರಿಸುತ್ತಾನೆ:

> ಶಿರ್ಷೀಕೆಯು . . . ಪುಸ್ತಕದ ಕೇಂದ್ರಿಯ ವಿಚಾರವೇನೆಂಬುದನ್ನು ತಿಳಿಸುತ್ತದೆ. ದೇವರ ವಿಮೋಚಿಸುವ ಕುರಿಯಾದಾತನೇ ತನ್ನ ಜನರ ಜೀವಿತಗಳಲ್ಲಿ ಮತ್ತು ಈ ಪುಸ್ತಕದ ಚಟುವಟಿಕೆಗಳಲ್ಲಿ ಪ್ರಾಬಲ್ಯವನ್ನು ಹೊಂದಿರುತ್ತಾನೆ. ದೇವರ ಕೆಲಸ ಮತ್ತು ಜನರನ್ನು ನಾಶಗೊಳಿಸುವದಕ್ಕೆ ಪ್ರಯತ್ನಿಸುವ ಶಕ್ತಿಗಳ ಮೇಲೆ ಅಂತಿಮವಾದ ಮತ್ತು ಸಂಪೂರ್ಣವಾದ ಜಯವನ್ನು ಗಳಿಸುವಾತನು ಆತನೇ ಆಗಿದ್ದಾನೆ. ಈ ಅತ್ಯಾಶ್ಚರ್ಯವಾದ ನಾಟಕದ ಅಂತಿಮ ದೃಶ್ಯಕ್ಕೆ ತೆರೆಯು ಎಳೆಯಲ್ಪಡುವ ವೇಳೆ, ವಾಚಕನು ಭಾವನಾತ್ಮಕವಾಗಿ ಒಳಗಾಗಿ ದೇವರ ಮುಂದೆ ಶಿರಬಾಗಿ ಆತ್ಮವನ್ನು ಕಲಕುವಂಥ ಪಲ್ಲವಿಯನ್ನು ಹಾಡುವವನಾಗುವನು . . . , "ತನ್ನ ರಕ್ತದಿಂದ ನಮ್ಮನ್ನು ದೇವರಿಗಾಗಿ ವಿಮೋಚಿಸಿರುವ ವಧಿತನಾದ ಕುರಿಯಾದಾತನು ಐಶ್ವರ್ಯ ಮತ್ತು ಮಾನ ಮತ್ತು ಪ್ರಭಾವ ಮತ್ತು ಬಲಗಳನ್ನು ಹೊಂದುವದಕ್ಕೆ ಯೋಗ್ಯನು."[2]

Summersನು ಉಲ್ಲೇಖಿಸಿರುವ ಹಾಡು ಪ್ರಕಟನೆ 5ನೇ ಅಧ್ಯಾಯದ ಮೇಲೆ ಆಧಾರವಾಗಿರುತ್ತದೆ. 4 ಮತ್ತು 5 ಅಧ್ಯಾಯಗಳು ಜೊತೆಯಾಗಿ ಸಾಗುತ್ತವೆ: 4ನೇ ಅಧ್ಯಾಯವು ದೇವರನ್ನು ಸೃಷ್ಟಿಕರ್ತನಾಗಿ ಆರಾಧಿಸುವದರ ಸುತ್ತಲು ಕೇಂದ್ರಕೃತವಾಗಿದ್ದರೆ, 5ನೇ ಅಧ್ಯಾಯವು ಕ್ರಿಸ್ತನನ್ನು ವಿಮೋಚಕನೆಂದು ಆರಾಧಿಸುವದನ್ನು ಒಳಗೊಂಡಿರುತ್ತದೆ. 5:1ರಲ್ಲಿ ಪರಲೋಕದ ನಾಟಕಕ್ಕೆ ತೆರೆಯು ಎತ್ತಲ್ಪಟ್ಟಾಗ, ಸಿಂಹಾಸನವು ಮಧ್ಯಭಾಗದಲ್ಲಿಯೇ ಉಳಿದಿತ್ತು. ಹಿರಿಯರು, ಜೀವಿಗಳು, ಮತ್ತು ಏಳು ಆತ್ಮಗಳು ಈಗಲೂ ಹಾಜರಿದ್ದರು (ವಚನಗಳು 5, 6). ಹೇಗೂ, ಈ ಹಂತದಲ್ಲಿ, ಒಂದು ನಿರೀಕ್ಷಿಸುವ ಗಾಳಿಯು ದೃಶ್ಯದ ಮೇಲೆ ನೇತಾಡುತ್ತಿತ್ತು.

### "ಯಾವನು ಯೋಗ್ಯರು?" (5:1-5)

**1ಸಿಂಹಾಸನದ ಮೇಲೆ ಕುಳಿತಿದ್ದಾತನ ಬಲಗೈಯಲ್ಲಿ ಒಂದು ಸುರುಳಿಯನ್ನು ಕಂಡೆನು;
ಅದರ ಎರಡು ಪಕ್ಕೆಗಳಲ್ಲಿಯೂ ಬರೆದಿತ್ತು; ಅದು ಏಳು ಮುದ್ರೆಗಳಿಂದ ಮುದ್ರಿತವಾಗಿತ್ತು.
2ಇದಲ್ಲದೆ ಬಲಿಷ್ಠನಾದ ಒಬ್ಬ ದೇವದೂತನು-ಈ ಸುರುಳಿಯನ್ನು ಬಿಚ್ಚುವದಕ್ಕೂ ಇದರ**

**ಮುದ್ರೆಗಳನ್ನು ಒಡೆಯುವದಕ್ಕೂ ಯಾವನು ಯೋಗ್ಯನು ಎಂದು ಮಹಾ ಶಬ್ದದಿಂದ ಸಾರುವದನ್ನು ಕಂಡೆನು. [3]ಆ ಸುರುಳಿಯನ್ನು ಬಿಚ್ಚುವದಕ್ಕಾದರೂ ಅದರೊಳಗೆ ನೋಡುವದಕ್ಕಾದರೂ ಪರಲೋಕದಲ್ಲಿಯಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಾಗಲಿ ಯಾವನಿಗೂ ಶಕ್ತಿಯಿರಲಿಲ್ಲ. [4]ಆಗ ಸುರುಳಿಯನ್ನು ಬಿಚ್ಚುವದಕ್ಕಾಗಲಿ ಅದರಲ್ಲಿ ನೋಡುವದಕ್ಕಾಗಲಿ ಯೋಗ್ಯನಾದವನು ಒಬ್ಬನೂ ಸಿಕ್ಕಲಿಲ್ಲವಾದ ಕಾರಣ ನಾನು ಬಹಳವಾಗಿ ಅಳುತ್ತಿರಲು ಹಿರಿಯರಲ್ಲಿ ಒಬ್ಬನು ನನಗೆ-[5]ಅಳಬೇಡ; ಅಗೋ, ಯೂದಾ ಕುಲದಲ್ಲಿ ಜನಿಸಿದ ಸಿಂಹವೂ ದಾವೀದನ ಅಂಕುರದವನೂ ಆಗಿರುವಾತನು ಜಯಹೊಂದಿದನು; ಆತನು ಸುರುಳಿಯನ್ನೂ ಆದರ ಏಳು ಮುದ್ರೆಗಳನ್ನೂ ಬಿಚ್ಚುವನು ಎಂದು ಹೇಳಿದನು.**

**ವಚನ 1.** ಹೆಚ್ಚುಕಡಿಮೆ ತಕ್ಷಣದಲ್ಲಿಯೇ, ಉದ್ವೇಗವು ಹೆಚ್ಚಾಗಲಾರಂಬಿಸುತ್ತದೆ. ಯೋಹಾನನು ಸಿಂಹಾಸನದ ಕಡೆಗೆ ನೋಡಿದಾಗ, ಆತನು ಸಿಂಹಾಸನದ ಮೇಲೆ ಕುಳಿತಿದ್ದಾತನ ಬಲಗೈಯಲ್ಲಿ ಒಂದು ಸುರುಳಿಯನ್ನು ಕಂಡನು; ಅದರ ಎರಡು ಪಕ್ಕೆಗಳಲ್ಲಿಯೂ ಬರೆದಿತ್ತು; ಅದು ಏಳು ಮುದ್ರೆಗಳಿಂದ ಮುದ್ರಿತವಾಗಿತ್ತು. ಸುರುಳಿ (ಪುಸ್ತಕ) ಎಂಬುದನ್ನು ಅನುವಾದಿಸಿರುವ βιβλίον (*biblion*) ಎಂಬ ಪದವು ನಿಖರವಾಗಿ "ಸುರುಳಿ" ಎಂದು ಅನುವಾದಿಸಲ್ಪಟ್ಟಿರುತ್ತದೆ (NKJV; NIV) ಯಾಕೆಂದರೆ ನಂತರದ ಕಾಲದ ವರೆಗೂ ಪುಟಗಳನ್ನೊಳಗೊಂಡ ಪುಸ್ತಕವು ಸಾಮಾನ್ಯ ಬಳಕೆಯಲ್ಲಿರಲಿಲ್ಲ. ಒಂದು ಸುರುಳಿಯು ಒಂದು ಅಥವಾ ಎರಡು ಕೋಲುಗಳಿಗೆ ಸುತ್ತಲ್ಪಟ್ಟಿರುತ್ತಿದ್ದ ಉದ್ದವಾದ ಕಾಗದದ ತುಂಡು ಆಗಿರುತ್ತಿತ್ತು. ದಲ್ಲಿ ಎಂಬುದನ್ನು ಅನುವಾದಿಸಿರುವ ἐπί (*epi*) ಎಂಬ ಪದವು ಗ್ರೀಕ್ ಭಾಷೆಯ ಒಂದು ಉಪಸರ್ಗವಾಗಿದ್ದು "ಮೇಲೆ" ಅಥವಾ "ಮೇಲ್ಭಾಗದಲ್ಲಿ" ಎಂಬ ಅರ್ಥವನ್ನು ಕೊಡುತ್ತದೆ. ದರ್ಶನದಲ್ಲಿ ಸುರುಳಿಯು ದೇವರ ನೇರವಾಗಿ ಚಾಚಲ್ಪಟ್ಟ ಕೈಯಲ್ಲಿತ್ತು ಎಂಬುದನ್ನು ಈ ಪದವು ಸೂಚಿಸುತ್ತದೆ.

ಸುರುಳಿಯು ಎರಡು ವೈಶಿಷ್ಟ್ಯತೆಗಳನ್ನು ಹೊಂದಿತ್ತು. ಮೊದಲನೆಯದ್ದು, ಕಾಗದದ ಎರಡು ಬದಿಗಳಲ್ಲಿಯೂ **ಬರೆದಿತ್ತು**. ಕಾಗದವು ಸಾಮಾನ್ಯವಾಗಿ ಪಪೈರಸ್ (ಜೋಡು ಹುಲ್ಲು) ನಿಂದ ಮಾಡಲ್ಪಟ್ಟದ್ದಾಗಿರುತ್ತಿತ್ತು. ಪಪೈರಸ್ ಗಿಡದ ಒಳಗಡೆ (ಬೆಂಡು) ತೆಳುವಾಗಿ ಕತ್ತರಿಸಲ್ಪಟ್ಟು ನೇರವಾದ ಪಟ್ಟಿಯಾಗಿ ಜೋಡಿಸಲ್ಪಟ್ಟಿರುತ್ತಿತ್ತು. ಬಳಿಕ ಮೊದಲ ಎಳೆಯ ಮೇಲೆ ಅಡ್ಡಲಾಗಿ ಇನ್ನೊಂದು ಎಳೆಯನ್ನು ಹಾಕಲಾಗುತ್ತಿತ್ತು. ಎರಡು ಎಳೆಗಳಿಗೆ ಅಂಟು ಹಾಕಿ ಚಪ್ಪಟೆಯಾಗಿ ಒತ್ತಲಾಗುತ್ತಿತ್ತು. ಕಾಗದವು ಒಣಗಿದ ಬಳಿಕ ಅದನ್ನು ಉಸುಬಿನ ಕಾಗದದಿಂದ ತಿಕ್ಕಿ ಮೃದು ಮಾಡಲಾಗುತ್ತಿತ್ತು. ಸಾಧಾರಣವಾಗಿ, ಲೇಖಕರು ಕಾಗದದ ಒಂದು ಬದಿಯಲ್ಲಿ ಮಾತ್ರವೇ ಬರೆಯುತ್ತಿದ್ದರು, ಯಾಕೆಂದರೆ ಒರಟು ಗೆರೆಗಳನ್ನೊಳಗೊಂಡಿದ್ದ ಪಕ್ಕೆಗಳಲ್ಲಿ ಬರೆಯುವದು ಕಷ್ಟಕರವಾಗಿರುತ್ತಿತ್ತು. ಯೋಹಾನನ ದರ್ಶನದಲ್ಲಿ, ಸುರುಳಿಯ ಎರಡೂ ಬದಿಗಳಲ್ಲಿ ಬರೆಯಲಾಗಿತ್ತು. ಈ ವಿವರವು ನಮಗೆ ಯೆಹೆಜ್ಕೇಲ 2:9, 10ರಲ್ಲಿನ ಸುರುಳಿಯನ್ನು ಜ್ಞಾಪಿಸುತ್ತದೆ, ಆದರೆ ಆ ಪುಸ್ತಕವು ಪ್ರಕಟನೆ ಪುಸ್ತಕದೊಳಗೆ ಅನಂತರದಲ್ಲಿ ಪರಿಚಯಿಸಲ್ಪಡುವ "ಚಿಕ್ಕ ಸುರುಳಿ" ಯೊಂದಿಗೆ ಉತ್ತಮವಾಗಿ ಸಂಬಂಧಗೊಳಿಸಲ್ಪಡುತ್ತದೆ (10:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕಾಗದವು ಎರಡು ಪಕ್ಕೆಗಳಲ್ಲಿಯೂ ಬರೆಯಲ್ಪಟ್ಟಿರುತ್ತದೆಂಬುದು ಸಂದೇಶದ *ಸಂಪೂರ್ಣತೆ*ಯನ್ನು ಸೂಚಿಸುತ್ತಿರಬಹುದಾಗಿದೆ.

ಎರಡನೆಯದಾಗಿ, ಸುರುಳಿಯು **ಏಳು ಮುದ್ರೆಗಳಿಂದ ಮುದ್ರಿತವಾಗಿತ್ತು**. ಶತಮಾನಗಳ ವರೆಗೂ, ಪ್ರಾಮುಖ್ಯವಾದ ದಸ್ತಾವೇಜುಗಳಿಗೆ ಮುದ್ರೆಯು ಹಾಕಲಾಗಿರುತ್ತದೆ (ನೋಡಿರಿ ಯೆಶಾಯ 29:11; ಯೆರೆಮೀಯ 32:44; ದಾನಿಯೇಲ 12:4). ಸುತ್ತಲ್ಪಟ್ಟಿರುವ ಅಥವಾ

ಮಡಚಲ್ಪಟ್ಟಿರುವ ದಸ್ತಾವೇಜಿನ ತುದಿಯಲ್ಲಿ ಕರಗಿಸಿದ ಮೇಣದ ಹನಿಯು ಹಾಕಲ್ಪಡುತ್ತಿತ್ತು. ಬಳಿಕ, ಮೇಣವು ಗಟ್ಟಿಯಾಗುವ ಮೊದಲೇ ಸಹಿಯನ್ನೊಳಗೊಂಡಿರುತ್ತಿದ್ದ ಒಂದು ಉಂಗುರ ಅಥವಾ ಲೋಹದ ಮುದ್ರೆಯನ್ನು ಅದರ ಮೇಲೆ ಒತ್ತಲಾಗುತ್ತಿತ್ತು. ಒಂದು ಮುದ್ರೆಯು ಮೂರು ಉದ್ದೇಶಗಳಿಗಾಗಿ ಇರುತ್ತಿತ್ತು: ಅದು ಒಡೆಯತ್ವವನ್ನು ರುಜುವಾತು ಪಡಿಸುತ್ತಿತ್ತು, ಸತ್ಯತೆಯನ್ನು ಖಾತ್ರಿಪಡಿಸುತ್ತಿತ್ತು, ಮತ್ತು ಅದರಲ್ಲಿನ ವಿಷಯಗಳನ್ನು ಭದ್ರವಾಗಿ ಕಾಯುತ್ತಿತ್ತು (7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒಂದು ಔಷಧದ ಬಾಟಲಿಯಲ್ಲಿನ ವಸ್ತುವನ್ನು ಒಂದು ಭದ್ರ ಮುಚ್ಚಳವು ಕಾಪಾಡುವ ರೀತಿಯಲ್ಲಿಯೇ, ಮುದ್ರೆಯು ಒಂದು ಹಸ್ತ ಪ್ರತಿಯಲ್ಲಿನ ವಿಷಯಗಳನ್ನು ಕಾಪಾಡುತ್ತಿತ್ತು: ಮುಚ್ಚಳವನ್ನು ಒಡೆದು ತೆರೆದಾಗ ಮಾತ್ರವೇ ನಮಗೆ ಒಳಗೆ ಏನಿರುತ್ತದೆಂಬುದು ತಿಳಿಯುತ್ತದೆ. ಈ ಸುರುಳಿಗೆ *ಏಳು* ಮುದ್ರೆಗಳಿದ್ದವು ಎಂಬ ವಾಸ್ತವಾಂಶವು ಅದು *ಸಂಪೂರ್ಣವಾಗಿ* ಮುಚ್ಚಲ್ಪಟ್ಟಿತ್ತು ಎಂಬುದನ್ನು ಸೂಚಿಸುತ್ತದೆ. ಮುದ್ರೆಯನ್ನು ಒಡೆಯದೆಯೇ ಅದರಲ್ಲಿ ಏನಿದೆ ಎಂಬುದನ್ನು ತಿಳಿಯುವದಕ್ಕೆ ಯಾವನಿಗೂ ಸಾಧ್ಯವಿರಲಿಲ್ಲ.

ಬಹುಶಃ ಸುರುಳಿಯ ಹೊರಗಿನ ತುದಿಗಳಲ್ಲಿ ಏಳು ಮುದ್ರೆಗಳು ಹಾಕಲ್ಪಟ್ಟಿರಬಹುದು. ಹೇಗೂ, ಸುರುಳಿಯು ಏಳು ಪ್ರತ್ಯೇಕವಾದ ಕಾಗದಗಳನ್ನು ಹೊಂದಿರುವ ಸಾಧ್ಯತೆಯಿದ್ದು, ಅವುಗಳಲ್ಲಿ ಪ್ರತಿಯೊಂದಕ್ಕೂ ಬೇರೆ ಬೇರೆಯಾದ ಮುದ್ರೆಯು ಹಾಕಲ್ಪಟ್ಟಿತ್ತು. ಈ ರೀತಿಯಾಗಿಯೇ ಇದ್ದದ್ದು ನಿಜವಾಗಿದ್ದರೆ, ಏಳನೆಯ ಕಾಗದವು ಸುತ್ತಲ್ಪಟ್ಟು ಮುದ್ರೆ ಹಾಕಲ್ಪಟ್ಟಿತ್ತು, ಬಳಿಕ ಏಳನೆಯ ಕಾಗದದ ಸುತ್ತಲು ಆರನೆಯ ಕಾಗದವು ಸುತ್ತಲ್ಪಟ್ಟು ಮುದ್ರೆ ಹಾಕಲ್ಪಟ್ಟಿತ್ತು, ಮತ್ತು ಹೀಗೆಯೇ ಉಳಿದ ಕಾಗದಗಳು ಸುತ್ತಲ್ಪಟ್ಟಿದ್ದವು. ಆ ರೀತಿಯಾಗಿ ವ್ಯವಸ್ಥೆಗೊಳಿಸಲ್ಪಟ್ಟಿರುವಿಕೆಯು ಮೊದಲನೆಯ ಮುದ್ರೆಯು ಒಡೆಯಲ್ಪಟ್ಟಾಗ ಸಂದೇಶದ ಮೊದಲ ಭಾಗವು ಹೇಗೆ ಬಯಲುಗೊಂಡಿತು ಎಂಬುದನ್ನು ಊಹಿಸಿಕೊಳ್ಳುವದು ಸುಲಭವಾಗುತ್ತದೆ, ಆದರೆ ಈ ವಿಚಾರವನ್ನು ಒಪ್ಪಿಕೊಳ್ಳುವದರಿಂದ ಕೆಲವೊಂದು ಅನಾನುಕೂಲತೆಗಳಿರುತ್ತವೆ: ಈ ವಿಧಾನವು ಒಂದು ಸುರುಳಿಯನ್ನು ಸಿದ್ಧಗೊಳಿಸಲು ಬಳಸುತ್ತಿದ್ದ ಸಾಮಾನ್ಯ ರೂಢಿಯಲ್ಲಿದ್ದ ವಿಧಾನವಾಗಿರಲಿಲ್ಲ; ಮತ್ತು ಹೀಗೆಯೇ ಮಾಡಲ್ಪಟ್ಟಿರುವದಾದಲ್ಲಿ, ಯೋಹಾನನು ಒಂದೇ ಒಂದು ಮುದ್ರೆಯನ್ನು, ಕಾಗದದ ಹೊರ ಭಾಗದಲ್ಲಿರದ್ದದ್ದನ್ನು ಮಾತ್ರವೇ ಕಂಡಿರುತ್ತಿದ್ದನು.

ಸುರುಳಿಯು ಎರಡು ಬದಿಗಳಲ್ಲಿಯೂ ಬರೆಯಲ್ಪಟ್ಟಿತ್ತು ಮತ್ತು ಬಳಿಕ ಏಳು ಸಾರಿ ಮುದ್ರೆ ಹಾಕಲ್ಪಟ್ಟಿತ್ತು ಎಂಬ ವಾಸ್ತವಾಂಶವು ಪ್ರಕಟನೆಯ ಅಂತಿಮವಾಗಿರುವಿಕೆಯನ್ನು ಸೂಚಿಸುತ್ತದೆ. ಇಷ್ಟು ವರ್ಷಗಳಿಂದಲೂ, ಮನುಷ್ಯರು ವಿಶೇಷವಾದ, ಹೆಚ್ಚುವರಿ ಪ್ರಕಟನೆಗಳನ್ನು ಪಡೆದುಕೊಂಡಿದ್ದೇವೆಂದು ಹೇಳಿಕೊಂಡಿರುತ್ತಾರೆ - ಆದರೆ ಇವುಗಳು ದೇವರ ಸಂಪೂರ್ಣವಾದ ಪ್ರಕಟನೆಗೆ ಹೆಚ್ಚಿನದನ್ನು ಕೂಡಿಸುವಂಥವುಗಳಾಗಿವೆ (ನೋಡಿರಿ 22:18, 19).

ಅನೇಕರು ಹೀಗೆ ಚಕಿತಗೊಳ್ಳುತ್ತಾರೆ, "ಈ ಸುರುಳಿಯ 'ಎರಡು ಪಕ್ಕೆಗಳಲ್ಲಿ ಬರೆದಿಯ್ಯು; ಅದು ಏಳು ಮುದ್ರೆಗಳಿಂದ ಮುದ್ರಿಸಲ್ಪಟ್ಟಿತ್ತು' ಎಂಬುದು ಏನಾಗಿರುತ್ತದೆ?" ವ್ಯಾಖ್ಯಾನ ಗ್ರಂಥಗಳಲ್ಲಿರುವ ವ್ಯಾಪಕವಾದ ಬೇರೆ ಬೇರೆಯಾದ ಊಹೆಗಳನ್ನು ಕುರಿತು ಓದುವದು ಒಂದು ರೀತಿಯಲ್ಲಿ ದಿಗ್ಭ್ರಮೆಯುಂಟು ಮಾಡುತ್ತದೆ - ನಮಗೆ ಸುರುಳಿಯಲ್ಲಿ ಏನಿತ್ತೆಂಬುದನ್ನು ತಿಳಿಯುವದಕ್ಕೆ ಸಾಧ್ಯವೇ ಇಲ್ಲವೆನೋ ಎಂಬಂತೆ ಹೇಳಲಾಗಿರುತ್ತದೆ. ಅತ್ಯಂತ ಆಸಕ್ತಿಕರವಾದ ವಿಚಾರಗಳಲ್ಲೊಂದು ಎಂದರೆ ಅದು ಒಂದು *ಉಯಿಲು* ಆಗಿತ್ತು - ಯಾಕೆಂದರೆ ರೋಮನ್ ಉಯಿಲುಗಳನ್ನು ಏಳು ಮುದ್ರೆಗಳಿಂದ ಭದ್ರಪಡಿಸಲಾಗುತ್ತಿತ್ತು. ಪ್ರಕಟನೆ ಪುಸ್ತಕವು ಯೇಸುವಿನ ಕಡೇ ಉಯಿಲು (ಚಿತ್ತ) ಮತ್ತು ಒಡಂಬಡಿಕೆಯ

ಭಾಗವಾಗಿದೆಯಾದ್ದರಿಂದ, ಈ ವಿಚಾರವು ಒಂದು ರೀತಿಯಲ್ಲಿ ಪ್ರಶಂಸನೀಯವಾಗಿರುತ್ತದೆ. ಹೇಗೂ, ಪವಿತ್ರಾತ್ಮನು ಆ ಸಾದೃಶ್ಯವನ್ನು ಮನಸ್ಸಿನಲ್ಲಿ ಹೊಂದಿರುವದಾದರೆ, ಆತನು ಅದನ್ನು ಮುಂದುವರೆಸಿಕೊಂಡು ಹೋಗಲಿಲ್ಲ.[3]

ಗೊಂದಲವನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ, ಯಾಕೆಂದರೆ - 6ನೇ ಅಧ್ಯಾಯದಿಂದ ಆರಂಭಗೊಂಡು - ನಮಗೆ ಸಂದೇಶವು ವಿವರವಾಗಿ ತಿಳಿಸಲ್ಪಟ್ಟಿರುತ್ತದೆ. ಮೊದಲನೆಯ ಮುದ್ರೆಯು ಒಡೆಯಲ್ಪಟ್ಟಾಗ, ಬಿಳಿ ಕುದುರೆಯ ಮೇಲೆ ಕೂತಿರುವಾತನು ಕಾಣಿಸಿಕೊಂಡನು; ಎರಡನೆಯ ಮುದ್ರೆಯು ಒಡೆಯಲ್ಪಟ್ಟಾಗ, ಕೆಂಪು ಕುದುರೆಯ ಮೇಲೆ ಕೂತಿದ್ದಾತನು ಕಾಣಿಸಿಕೊಂಡನು ಮತ್ತು ಹೀಗೆ ಮುಂದುವರೆಯುತ್ತದೆ. ಸುರುಳಿಯು ಪ್ರಕಟನೆ ಪುಸ್ತಕ ಉಳಿದ ಭಾಗವನ್ನು ಒಳಗೊಂಡಿತ್ತೆಂಬುದು ಸ್ಪಷ್ಟಗೊಳ್ಳುತ್ತದೆ: 6ರಿಂದ 22ನೇ ಅಧ್ಯಾಯಗಳು. ಏಳನೆಯ ಮುದ್ರೆಯು ಒಡೆಯಲ್ಪಟ್ಟಾಗ, ಏಳು ತುತೂರಿಗಳು ಊದಲ್ಪಡುತ್ತವೆ. ಬಳಿಕ, ಏಳನೆಯ ತುತೂರಿಯು ಊದಲ್ಪಟ್ಟಾಗ, ಏಳು ಪಾತ್ರೆಗಳು ಸುರಿಯಲ್ಪಡುತ್ತವೆ. ಎಲ್ಲಾ ಸಂದೇಶವು, ನೇರವಾಗಿ ಅಥವಾ ಪರೋಕ್ಷವಾಗಿ ಆಗಲಿ, ಏಳು ಮುದ್ರೆಗಳನ್ನು ಒಡೆಯುವ ಮೂಲಕವಾಗಿ ಪ್ರಕಟಗೊಳಿಸಲ್ಪಡುತ್ತದೆ; ಆದದರಿಂದ, ಏಳು ಮುದ್ರೆಗಳುಳ್ಳ ಸುರುಳಿಯು ಎಲ್ಲಾ ಸಂದೇಶವನ್ನು ಒಳಗೊಂಡಿತ್ತು.

**ವಚನ 2.** ಉದ್ವೇಗವು ಅಧಿಕಗೊಳ್ಳುತ್ತಾ ಸಾಗಿದಂತೆ **ಬಲಿಷ್ಠನಾದ ಒಬ್ಬ ದೇವದೂತನು** ವೇದಿಕೆಯನ್ನು ಪ್ರವೇಶಿಸುತ್ತಾನೆ. ಶಾರೀರಿಕ ಹಾಗೂ ಆತ್ಮೀಕ ಲೋಕಗಳಲ್ಲಿ ಪ್ರತಿಧ್ವನಿಸಿರಬಹುದಾದಷ್ಟು **ಮಹಾ ಶಬ್ದದಿಂದ** ಕೂಗಿದ್ದನು, ಆತನು ಈ ಕರೆಯನ್ನು ಕೊಟ್ಟನು: **ಈ ಸುರುಳಿಯನ್ನು ಬಿಚ್ಚುವದಕ್ಕೂ ಇದರ ಮುದ್ರೆಗಳನ್ನು ಒಡೆಯುವದಕ್ಕೂ ಯಾವನು ಯೋಗ್ಯನು.** ABಯು ಉಲ್ಲೇಖವನ್ನು ವಿಸ್ತಾರಗೊಳಿಸುತ್ತಾ ಹೀಗೆ ಹೇಳುತ್ತದೆ, "ಸುರುಳಿಯನ್ನು ತೆರೆಯುವದಕ್ಕೆ ಯಾವನು ಯೋಗ್ಯನು? ಮತ್ತು ಅದರ ಮುದ್ರೆಗಳನ್ನು ಒಡೆಯುವದಕ್ಕೆ - ಹಕ್ಕನ್ನು ಹೊಂದಿರುವವನು ಮತ್ತು ಯೋಗ್ಯನು ಮತ್ತು ನೈತಿಕವಾಗಿ ಅರ್ಹನು - ಯಾರು?" ಒಂದು ಮುದ್ರೆಯನ್ನು ತೆರೆಯುವದೆಂದರೆ ಕೇವಲ ಮೇಣವನ್ನು ಒಡೆಯುವದಕ್ಕಿಂತಲೂ ಅಧಿಕವಾದದ್ದನ್ನು ಒಳಗೊಂಡಿರುತ್ತಿತ್ತು; ಒಂದು ಮುದ್ರೆಯನ್ನು ಒಡೆಯುವವನು ದಸ್ತಾವೇಜಿನಲ್ಲಿರುವ ವಿಷಯಗಳಿಗಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳುವವನಾಗಿದ್ದನು.

ಪ್ರಶ್ನೆಯು ಕೇಳಲ್ಪಟ್ಟ ಬಳಿಕ, ಯೋಹಾನನು ಕಾಯುತ್ತಿದ್ದ ಹಾಗೆ, ಅಲ್ಲೊಂದು ವಿರಾಮ - ಒಂದು ಸುದೀರ್ಘವಾದ ವಿರಾಮ - ಇದ್ದಿರಬಹುದು. ಆ ಸುರುಳಿಯನ್ನು ಒಡೆಯುವದಕ್ಕೆ ಯಾರಾದರೊಬ್ಬರು ಸಿಕ್ಕುವರೆಂಬುದಕ್ಕೆ ಆತನಿಗೆ ಸಕಲ ಕಾರಣಗಳೂ ಇದ್ದವು. ಅಂತೂ, ಆತನಿಗೆ "ಮುಂದೆ ಆಗಬೇಕಾದವುಗಳನ್ನೂ ಬರೆ" ಎಂದು ಆಜ್ಞಾಪಿಸಲ್ಪಟ್ಟಿದ್ದನಷ್ಟೆ (1:19). ಅಷ್ಟುಮಾತ್ರವಲ್ಲದೆ, ಪರಲೋಕದೊಳಗೆ ಬರುವಂತೆ ಆಮಂತ್ರಿಸಲ್ಪಟ್ಟಾಗ, ಆತನಿಗೆ "ಇಲ್ಲಿಗೆ ಏರಿ ಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು" ಎಂದು ಹೇಳಲಾಗಿತ್ತು (4:1). ಆದ್ದರಿಂದ ಯಾರಾದರೂ ಮುಂದೆ ಬಂದು ಆತನ ಮನಸ್ಸಿನಲ್ಲಿ ಕಾಡುತ್ತಿದ್ದ ಪ್ರಶ್ನೆಗಳಿಗೆ ಉತ್ತರಗಳನ್ನು ಬಯಲುಗೊಳಿಸುವಂತೆ ಉಸಿರು ಗಟ್ಟಿಯಾಗಿ ಹಿಡಿದುಕೊಂಡು ಕಾಯುತ್ತಿರುವದನ್ನು ನಾವು ಕಲ್ಪನೆ ಮಾಡಿಕೊಳ್ಳಬಹುದಾಗಿದೆ: "ಕ್ರೈಸ್ತರಿಗೆ ಏನು ಸಂಭವಿಸುವದು? ಎಲ್ಲವೂ ಕೊನೆಯಲ್ಲಿ ಚೆನ್ನಾಗಿಯೇ ಆಗುವದೋ? ದೇವರು ಹೇಗೆ ಎಲ್ಲವನ್ನೂ ಅಂತಿಮವಾಗಿ ಚೆನ್ನಾಗಿಯೇ ಸಂಭವಿಸುವಂತೆ ಮಾಡ*ಬಲ್ಲನು*?"

**ವಚನ 3.** ಅಂತಿಮವಾಗಿ **ಆ ಸುರುಳಿಯನ್ನು ಬಿಚ್ಚುವದಕ್ಕಾದರೂ ಇದರೊಳಗೆ ನೋಡುವದಕ್ಕಾದರೂ ಪರಲೋಕದಲ್ಲಿಯಾಗಲಿ ಭೂಮಿಯಲ್ಲಿಯಾಗಲಿ ಭೂಮಿಯ ಕೆಳಗಾಗಲಿ**

**ಯಾವನಿಗೂ ಶಕ್ತಿಯಿರಲಿಲ್ಲ** ಎಂಬುದು ನೋವುಭರಿತವಾಗಿ ಸ್ಪಷ್ಟಗೊಂಡಿತ್ತು. ಪರಲೋಕದಲ್ಲಿ ಇರುವವರೊಳಗೆ ದೇವದೂತರು, ಸೆರಾಫಿಯರು, ಕೆರೂಬಿಯರು, ಮತ್ತು ಮಿಕಾಯೇಲನಂತಹ ಪ್ರಧಾನದೂತರು ಸೇರಿದ್ದರು. ಭೂಮಿಯಲ್ಲಾಗಲಿ ಎಂಬ ಪದಗುಚ್ಛದಲ್ಲಿ ಕ್ರೈಸ್ತೀಯ ಮಹಾನ್ ನಾಯಕರು, ಭಕ್ತಿವಂತ ದೇವಜನರು, ಮತ್ತು ಸ್ವತಃ ಯೋಹಾನನನ್ನು ಸಹ ಒಳಗೊಂಡಿದ್ದಿರಬಹುದು. ಭೂಮಿಯ ಕೆಳಗಾಗಲಿ ಎಂಬುದು ಪಾತಾಳದ (ಅದೃಶ್ಯವಾದ) ಜಗತ್ತನ್ನು ಸೂಚಿಸಬಹುದಾಗಿದೆ, ಅಲ್ಲಿ ಮರಣ ಹೊಂದಿರುವವರು ನ್ಯಾಯತೀರ್ಪಿಗಾಗಿ ಕಾಯ್ದುಕೊಂಡಿರುತ್ತಾರೆ (1:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೇಸುವು ಮರಣಿಸಿದ ವೇಳೆಯಲ್ಲಿ, ಆತನು ತಾತ್ಕಾಲಿಕವಾಗಿ ಪಾತಾಳಕ್ಕೆ ಹೋದನು (ಅಪೊಸ್ತಲರ ಕೃತ್ಯಗಳು 2:31); ಆದರೆ ಹೊಸ ಒಡಂಬಡಿಕೆಯೊಳಗೆ ಅನಂತರದ ಭಾಗದಲ್ಲಿ, ತತ್ಪರಿಣಾಮವಾಗಿ ಅದು "ಭೂಮಿಯ ಅಧೋಭಾಗ" ಎಂದು ಕರೆಯಲ್ಪಟ್ಟಿರುತ್ತದೆ (ನೋಡಿರಿ ಎಫೆಸ 4:9). 3ನೇ ವಚನದಲ್ಲಿ, AB ತರ್ಜುಮೆಯು "ಭೂಮಿಯ ಕೆಳಗೆ [ಸತ್ತವರ ಮಂಡಲ, ಪಾತಾಳದಲ್ಲಿ]" ಎಂದು ಹೇಳುತ್ತದೆ. "ಭೂಮಿಯ ಕೆಳಗೆ" ಎಂಬುದು ಸತ್ತವರ ಆತ್ಮಗಳ ಮಂಡಲವನ್ನು ಸೂಚಿಸುವದಾಗಿತ್ತು ಮತ್ತು ಅದರೊಳಗೆ ಅಬ್ರಹಾಮ, ಮೋಶೆ ದಾವೀದ, ಎಲೀಯ, ಮತ್ತು ಪೌಲರಂತಹ ಪ್ರಸಿದ್ಧ ವ್ಯಕ್ತಿಗಳನ್ನು ಒಳಗೊಂಡಿತ್ತು. ಇವರಷ್ಟು ಮಹಾನ್ ವ್ಯಕ್ತಿಗಳು ಮತ್ತು ಉತ್ತಮರಿದ್ದಾಗ್ಯೂ, ಸುರುಳಿಯನ್ನು ಒಡೆಯುವದಕ್ಕೆ ಯಾವನೂ ಯೋಗ್ಯನಾಗಿರಲಿಲ್ಲ. "ಪರಲೋಕದಲ್ಲಿಯಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಾಗಲಿ ಯಾವನಿಗೂ ಶಕ್ತಿಯಿರಲಿಲ್ಲ" ಎಂಬ ಪರಿಭಾಷೆಯು ಸರಳವಾಗಿ ಸುರುಳಿಯನ್ನು ಒಡೆಯುವದಕ್ಕೆ "*ಎಲ್ಲಿಯೇ ಆಗಲಿ* ಯಾವನೂ ಇರಲಿಲ್ಲ" ಎಂಬುದನ್ನು ಒತ್ತಿ ಹೇಳುವದಾಗಿರುತ್ತದೆ (ನೋಡಿರಿ ಫಿಲಿಪ್ಪಿ 2:10). ಯಾವನೂ ಮುಂದೆ ಬರಲಿಲ್ಲ.

**ವಚನ 4.** ಆ ಕ್ಷಣದಲ್ಲಿ, ತಾನು ಯಾವದನ್ನು ತಿಳಿಯಬೇಕೆಂದು ಹಂಬಲಿಸುತ್ತಿರುವೆನೋ ಅದನ್ನು ಎಂದಿಗೂ ತಿಳಿದುಕೊಳ್ಳಲಾರೆನೆಂದು ಯೋಹಾನನಿಗೆ ತೋರಿತು. ಆತನು ಹೀಗೆ ಬರೆಯುತ್ತಾನೆ, **ಆಗ ಸುರುಳಿಯನ್ನು ಬಿಚ್ಚುವದಕ್ಕಾಗಲಿ ಅದರಲ್ಲಿ ನೋಡುವದಕ್ಕಾಗಲಿ ಯೋಗ್ಯನಾದವನು ಒಬ್ಬನೂ ಸಿಕ್ಕಲಿಲ್ಲವಾದ ಕಾರಣ ನಾನು ಬಹಳವಾಗಿ ಅಳುತ್ತಿರಲು. ಅಳುತ್ತಿರಲು** ಎಂಬ ಪದವು κλαίω (*klaiō*) ಎಂಬ ಗ್ರೀಕ್ ಕ್ರಿಯಾಪದದಿಂದ ಬಂದದ್ದಾಗಿದ್ದು "ರೋದಿಸುವದು, ಗೋಳಾಡುವದು" ಎಂಬ ಅರ್ಥವನ್ನು ಕೊಡುತ್ತದೆ. ಯೇಸುವು ಯೆರೂಸಲೇಮಿನ ವಿಷಯವಾಗಿ ಅಳುತ್ತಿದ್ದನೆಂಬುದರ ಕುರಿತು ಬರೆಯುವಾಗ ಲೂಕನು ಇದೇ ಪದವನ್ನು ಬಳಸಿದನು (ಲೂಕ 19:41) ಇದು ಶಾರೀರಿಕ ನೋವಿಗಿಂತಲೂ ಆಳವಾದ ವೇದನೆಯ ಕಾರಣದಿಂದುಂಟಾದ ಅಳುವಿಕೆಯಾಗಿರುತ್ತದೆ. ಯೋಹಾನನು ಬಾಧೆಯನ್ನನುಭವಿಸುತ್ತಿದ್ದ ತನ್ನ ಸಹೋದರರು ಹಾಗೂ ಸಹೋದರಿಯರ ಮೇಲಿದ್ದ ಕಳಕಳಿಯಿಂದಾಗಿ ಅಳುತ್ತಿದ್ದನು - ಯಾಕೆಂದರೆ ದೇವರ ವಿಮೋಚನಾ ಯೋಜನೆಗಳ ಕುರಿತು ಅವನಿಗೆ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ.

**ವಚನ 5.** ಯೋಹಾನನು ಬಹಳ ಹೊತ್ತಿನ ವರೆಗೆ ಅಳಲಿಲ್ಲ, ಯಾಕೆಂದರೆ ಹಿರಿಯರೊಳಗೆ ಒಬ್ಬನು ಯೋಗ್ಯನಾದವನೊಬ್ಬನು *ಇದ್ದಾನೆ* ಎಂದು ಹೇಳುವ ಮೂಲಕ ಆತನ ಕಣ್ಣೀರನ್ನು ಬತ್ತಿಸಿದನು: **ಅಳಬೇಡ; ಅಗೋ, ಯೂದಾ ಕುಲದಲ್ಲಿ ಜನಿಸಿದ ಸಿಂಹವೂ ದಾವೀದನ ಅಂಕುರದವನೂ ಆಗಿರುವಾತನು ಜಯಹೊಂದಿದನು; ಆತನು ಸುರುಳಿಯನ್ನೂ ಅದರ ಏಳು ಮುದ್ರೆಗಳನ್ನೂ ಬಿಚ್ಚುವದನು.**

ಹಿರಿಯರು ಬಳಸಿದ ಬಿರುದುಗಳು ಮೆಸ್ಸೀಯನಿಗೆ ಸಂಬಂಧಿತ ಮಾತುಗಳಾಗಿವೆ: **ಸಿಂಹ .**

**. . ಯೂದಾ ಕುಲದಲ್ಲಿ ಜನಿಸಿದ** ಎಂಬ ಮಾತುಗಳು ಆದಿಕಾಂಡ 49:8-11ನ್ನು ಜ್ಞಾಪಿಸುತ್ತವೆ, ಅಲ್ಲಿ ಯಾಕೋಬನು ಪ್ರವಾದನಾತ್ಮಕವಾಗಿ ರಾಜದಂಡವನ್ನು ತನ್ನ ಮಗನಾದ ಯೆಹೂದನಿಗೆ ಕೊಟ್ಟನು, ಹೀಗೆ ಆತನ ಸಂತತಿಯವರನ್ನು ಅರಸರ ಕುಲವನ್ನಾಗಿ ಮಾಡಿದನು. "ಸಿಂಹವು ಅತ್ಯಂಥ ಬಲಿಷ್ಠ ಮತ್ತು ಅತ್ಯಂಥ ಬಿರುಸಿನ ಪ್ರಾಣಿಯಾಗಿ ಬೈಬಲ್ ಲೇಖಕರಿಗೆ ಪರಿಚಿತ"[4] ಆಗಿರುವದರಿಂದ "ಯೂದಾ ಕುಲದಲ್ಲಿ ಜನಿಸಿದ ಸಿಂಹ" ಎಂಬುದು ಯಾಕೋಬನ ನಾಲ್ಕನೆಯ ಮಗನ ಸಂತತಿಯಿಂದ ಇದುವರೆಗೂ ಬರಲಿದ್ದವರಲ್ಲಿಯೇ ಅತ್ಯಂಥ ಮಹಾನ್ ವ್ಯಕ್ತಿಯನ್ನು ಸೂಚಿಸುವದಾಗಿತ್ತು.

**ದಾವೀದನ ಅಂಕುರದವನೂ** ಎಂಬ ಪರಿಭಾಷೆಯು ನಮಗೆ ಯೆಶಾಯ 11ನ್ನು ಜ್ಞಾಪಿಸುತ್ತದೆ, ಅದು "ಇಷಯನ ಅಂಕುರ" ಎಂಬುದನ್ನು ಕುರಿತು ಹೇಳುತ್ತದೆ (ಯೆಶಾಯ 11:10; ನೋಡಿರಿ ಯೆಶಾಯ 11:1). ಇಷಯನು ದಾವೀದನ ತಂದೆಯಾಗಿದ್ದನು. "ದಾವೀದನ ಅಂಕುರ" ಎಂಬುದರ ಪ್ರಾಥಮಿಕ ಒತ್ತು ಏನೆಂದರೆ ಮೆಸ್ಸೀಯನು ದಾವೀದನ ಸಂತತಿಯೊಳಗಿಂದ ಬರಲಿದ್ದನು ಎಂಬುದೆ. CEVಯಲ್ಲಿ "ಅರಸನಾದ ದಾವೀನ ಮರಿ ಸಂತಾನ" ಎಂದಿರುತ್ತದೆ. "ಅಂಕುರ" ಎಂಬ ಪದಗುಚ್ಛವು ಎರಡನೆಯ ಸೂಚ್ಯಾರ್ಥಗಳನ್ನು ಸಹ ಹೊಂದಿದೆ: (1) "ಅಂಕುರ" ಎಂಬ ಪದವು "ಜೀವದ ಮೂಲ" ವನ್ನು ಸೂಚಿಸಬಲ್ಲದು. ಆತನ ಮಾನವತೆಗೆ ಸಂಬಂಧ ಪಟ್ಟಂತೆ, ಯೇಸುವು ದಾವೀದನಲ್ಲಿ ತನ್ನ "ಅಂಕುರ" ಹೊಂದಿದ್ದನು . . . ಆದರೆ ಆತನ ದೇವತ್ವಕ್ಕೆ ಸಂಬಂಧ ಪಟ್ಟಂತೆ, ಯೇಸುವು ದಾವೀದನ ಅಂಕುರದವನು ಆಗಿದ್ದನು."[5] (2) ಅಂಕುರ ಎಂಬ ಪದವು ನಮಗೆ ಯೆಶಾಯ 53:2ನ್ನು ಜ್ಞಾಪಿಸುತ್ತದೆ: "ಒಣನೆಲದೊಳಗೆ ಬೇರಿನಿಂದ ಹೊರಡುವ ಅಂಕುರದಂತೆಯೂ . . . ಬೆಳೆದನು." ಯೇಸುವು ಜನಿಸಿದ ವೇಳೆ, ದಾವೀದನ ಸಂತತಿಯವನೊಬ್ಬನು ಸಿಂಹಾಸನದ ಮೇಲೆ ಕುಳಿತು ಅನೇಕ ಶತಮಾನಗಳಾಗಿದ್ದವು; ದಾವೀದನ ಸಂತಾನವು ಬಹಳವಾಗಿ ಕ್ಷೀಣಗೊಂಡಿತ್ತು.

ಯೂದಾ ಕುಲದಲ್ಲಿ ಜನಿಸಿದ ಸಿಂಹ ಹಾಗೂ ದಾವೀದನ ಅಂಕುರದವನು **ಜಯಹೊಂದಿದವನು; ಆತನು ಸುರುಳಿಯನ್ನು ಬಿಚ್ಚುವನು** ಎಂಬುದನ್ನು ಒತ್ತಿ ಹೇಳಲಾಯಿತು. "ಜಯಹೊಂದಿದನು" ಎಂಬುದು ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ಪದೇ ಪದೇ ಬಳಸಿದಂಥ ಪದವಾಗಿರುತ್ತದೆ; ಅದು "ವಿಜಯ" ಎಂಬುದಕ್ಕಿರುವ νίκη (*nikē*) ಎಂಬ ಗ್ರೀಕ್ ಪದದ ಕ್ರಿಯಾಪದವಾಗಿರುತ್ತದೆ. ಈತನು ಜಯಹೊಂದಿದವನಾಗಿದ್ದನಾದ್ದರಿಂದ, ಸುರುಳಿಯನ್ನು ಬಿಚ್ಚುವದಕ್ಕೆ ಆತನು ಅರ್ಹನಾಗಿದ್ದನು.

ವಾಕ್ಯಭಾಗವು **ಯೇಸು**ವಿನ ಕುರಿತು ಮಾತಾಡುತ್ತದೆ. ಮಾನವ ಕಡೆಯಲ್ಲಿ, ಯೇಸುವು ಯೆಹೂದ ಹಾಗೂ ದಾವೀದನ ಸಂತತಿಯವನಾಗಿದ್ದನು (ಮತ್ತಾಯ 1:1, 3, 6, 17; ಇಬ್ರಿಯ 7:14; ಪ್ರಕಟನೆ 22:16). ಅಲ್ಲದೆ, ಆತನು ಒಬ್ಬ "ಜಯಹೊಂದಿದವನಾಗಿದ್ದನು": ಆತನು ಶೋಧನೆಯನ್ನು ಜಯಿಸಿದನು; ಆತನು ಸೈತಾನನ ನಿರಂತರವಾದ ದಾಳಿಯನ್ನು ಜಯಿಸಿದನು; ಆತನು ಜೀವನದ ನಿರಾಶೆಗಳನ್ನು ಜಯಿಸಿದನು. ಹೇಗೂ, ನಾವು ಮುಂದೆ ನೋಡಲಿರುವ ಪ್ರಕಾರ, "ಜಯಹೊಂದಿದವನು" ಆಗಿರುವದಾಗಿ ಕ್ರಿಸ್ತನನ್ನು ಕರೆಯುವದು ಪ್ರಾಥಮಿಕವಾಗಿ ಯೇಸುವು ಮರಣದ ಮೇಲೆ ಹೊಂದಿದ ಜಯವನ್ನು ಸೂಚಿಸುತ್ತದೆ.

## ಕುರಿಯಾದಾತನು ಯೋಗ್ಯನು (5:6-10)

**6 ಸಿಂಹಾನವೂ ನಾಲ್ಕು ಜೀವಿಗಳೂ ಇದ್ದ ಸ್ಥಳಕ್ಕೂ ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿ ಕೊಯ್ಯಲ್ಪಟ್ಟದ್ದಾಗಿ ನಿಂತಿರುವದನ್ನು ಕಂಡೆನು ಅದಕ್ಕೆ ಏಳು ಕೊಂಬುಗಳೂ ಏಳು**

**ಕಣ್ಣುಗಳೂ ಇದ್ದವು; ಅವು ಏನೆಂದರೆ ಭೂಮಿಯ ಮೇಲೆಲ್ಲಾ ಕಳುಹಿಸಲ್ಪಟ್ಟಿರುವ ದೇವರ ಏಳು ಆತ್ಮಗಳು. [7]ಈತನು ಮುಂದೆ ಬಂದು ಸಿಂಹಸನದ ಮೇಲೆ ಕೂತಿದ್ದಾತನ ಬಲಗೈಯೊಳಗಿಂದ ಆ ಸುರುಳಿಯನ್ನು ತೆಗೆದುಕೊಂಡನು. [8]ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದುರು. ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವರಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪರತಿಗಳೂ ಇದ್ದವು. [9]ಅವರು ಹೊಸ ಹಾಡನ್ನು ಹಾಡುತ್ತಾ - ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳ ವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವ ನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು ಎಂದು ಹೇಳಿದರು.**

**ವಚನ 6.** ಯೋಹಾನನ ನಿರೀಕ್ಷೆಗಳು ಮರುಜೀವ ಪಡೆದುಕೊಂಡಿದ್ದವು. ಆತನು ತಿರುಗಿಕೊಂಡು ನೋಡಿದನು, ಅಲ್ಲಿ ಆತನು ಒಂದು ಸಿಂಹವನ್ನು ಕಾಣುವೆನೆಂದು ನಿರೀಕ್ಷಿಸಿಕೊಂಡಿದ್ದನು (ವ. 5). ಬದಲಾಗಿ ಆತನು ಅಲ್ಲಿ ಒಂದು ಕುರಿಯನ್ನು ಕಂಡನು. **ಸಿಂಹಾಸನವೂ ನಾಲ್ಕು ಜೀವಿಗಳೂ ಇದ್ದ ಸ್ಥಳಕ್ಕೂ ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿ ಕೊಯ್ಯಲ್ಪಟ್ಟದ್ದಾಗಿ ನಿಂತಿರುವದನ್ನು ಕಂಡೆನು**. ಆತನು ಆತ್ಯಾಶ್ಚರ್ಯದಿಂದ ಕಣ್ಣು ಮಿಟಿಕಿಸಿರಬಹುದಾಗಿದೆ. ಆತನು ಭಯಗೊಳಿಸುವಂತಹ ಒಂದು ಜೀವಿಯು ಇರುವದನ್ನು ಕಾಣುವೆನೆಂದು ಆತನು ಭಾವಿಸಿದ್ದನು, ಆದರೆ ಆತನ ಮುಂದೆ ಇದ್ದದ್ದು ಅತ್ಯಂಥ ಅಸಹಾಯಕವಾದ ಹಾಗೂ ಹಾನಿಕಾರಕವಲ್ಲದ ಪ್ರಾಣಿಗಳಲ್ಲೊಂದಾಗಿತ್ತು. **ಮಧ್ಯದಲ್ಲಿ** ಎಂಬುದನ್ನು ಅನುವಾದಿಸಿರುವ ἐν μέσῳ (*en mesō*) ಎಂಬ ಗ್ರೀಕ್ ಪದಗುಚ್ಛವು ಸಿಂಹಾನದ "ನಡುವೆ" ಎಂದು ಅನುವಾದಿಸಲ್ಪಟ್ಟಿದ್ದರೆ ಉತ್ತಮವಾಗಿರುತ್ತದೆ. ಈ ಪರಿಭಾಷೆಯು ಸಿಂಹಾಸನದ ಮೇಲೆ ಕೂತಿದ್ದಾತನ ಸಂಗಡ ಕುರಿಯಾದಾತನಿಗಿದ್ದ ನಿಕಟತೆಯನ್ನು ಇದು ಒತ್ತಿ ಹೇಳುತ್ತದೆ. **ಕುರಿ** ಎಂಬ ಪದವನ್ನು ಅನುವಾದಿಸಿರುವ ἀρνίον (*arnion*) ಎಂಬ ಗ್ರೀಕ್ ಪದದ ಅರ್ಥವು "ಕುರಿ ಮರಿ" ಎಂದಾಗಬಲ್ಲದು. ಈ ದೃಶ್ಯವನ್ನು ಮನಸ್ಸಿನಲ್ಲಿ ತೆಗೆದುಕೊಳ್ಳಬೇಕಾದರೆ, ಮೊದಲು ಒಂದು ಕುರಿಯನ್ನು, ಬಹುಶಃ ಆಗಷ್ಟೆ ಹುಟ್ಟಿದ ಕಾಲುಗಳು ಅಲ್ಲಾಡುತ್ತಿರುವ ಕುರಿಯೊಂದನ್ನು ಊಹಿಸಿಕೊಳ್ಳಿರಿ. ಬಳಿಕ "ಇನ್ನೂ ತೆರೆದಿರುವ ಮತ್ತು ವಾಸಿಗೊಳ್ಳದ ಗಾಯವನ್ನು ಹೊಂದಿದ್ದ,"[6] ಅದರ ಸ್ವಂತ ರಕ್ತದಿಂದ ಉಣ್ಣೆಯೆಲ್ಲಾ ಒದ್ದೆಯಾಗಿರುವಂಥಹ, ಗಂಟಲು ಕತ್ತರಿಸಲ್ಪಟ್ಟಿರುವ ಕುರಿಯನ್ನು ಕಲ್ಪಿಸಿಕೊಳ್ಳಿರಿ.

**ಕೊಯ್ಯಲ್ಪಟ್ಟದ್ದಾಗಿ** ಎಂಬ ಪದಗುಚ್ಛವು ಕುರಿಯು ಕೊಯ್ಯಲ್ಪಟ್ಟಿತ್ತೋ ಅಥವಾ ಇಲ್ಲವೋ ಎಂಬ ವಿಷಯದಲ್ಲಿ ಒಂದು ಸಂಶಯವಿತ್ತೆಂಬ ಅರ್ಥವನ್ನು ಕೊಡುವದಿಲ್ಲ. 9 ಮತ್ತು 12 ವಚನಗಳಲ್ಲಿ "ಲ್ಪಟ್ಟದ್ದಾಗಿ" ಎಂಬ ಪದವಿಲ್ಲದೆಯೇ "ವಧಿತವಾದ" ಎಂಬ ಪದವಿರುತ್ತದೆ. "ಕೊಯ್ಯಲ್ಪಟ್ಟದ್ದಾಗಿ" ಎಂಬ ಪದದ ಅರ್ಥವು ಕುರಿಯಾದಾತನು ಕೊಯ್ಯ*ಲ್ಪಟ್ಟಿದ್ದನಾದ್ದರಿಂ*ದ ಆತನು ಕೊಯ್ಯ*ಲ್ಪಟ್ಟದ್ದಾಗಿ ಕಂಡನು* ಎಂಬುದಾಗಿರುತ್ತದೆ. "ಕೊಯ್ಯಲ್ಪಟ್ಟ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು σφάζω (*sphazō*) ಎಂಬ ಪದದಿಂದ ಬಂದದ್ದಾಗಿದ್ದು ಅದು ಒಂದು ಕ್ರೂರವಾದ ಮರಣವನ್ನು ಸೂಚಿಸುತ್ತದೆ. NEB ತರ್ಜುಮೆಯಲ್ಲಿ "ಆತನ ಮೇಲೆ ಕತ್ತರಿಸಲ್ಪಟ್ಟ ಗುರುತುಗಳನ್ನು ಹೊಂದಿದವನಾಗಿ" ಎಂದು ಇರುತ್ತದೆ. ನಮಗೆ ಅತ್ಯಂಥ ಆಸಕ್ತಿಕರವಾದದ್ದೆಂದರೆ ಈ ಕ್ರೂರವಾದ ಮರಣದ ಉದ್ದೇಶದ ಕುರಿತರು ಗ್ರೀಕ್ ಪದವು ಏನು ಹೇಳುತ್ತದೆ ಎಂಬುದೆ. W. E. Vineನು ಗಮನಕ್ಕೆ ತಂದಿದ್ದೇನೆಂದರೆ *sphazō* ಎಂಬುದರ

ಅರ್ಥವು "ಕೊಯ್ಯಿ, ವಧಿಸು, ವಿಶೇಷವಾಗಿ *ಯಜ್ಞಗಳಿಗಾಗಿರುವ* ಬಲಿಪಶುಗಳನ್ನು . . ."[7] ಎಂಬ ಅರ್ಥವನ್ನು ಕೊಡುತ್ತದೆ.

ಕೊಯ್ಯಲ್ಪಟ್ಟ ಕುರಿಯು ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನಿಗೆ ಸಂಕೇತವಾಗಿತ್ತು. ಯೆಶಾಯನು ಯೇಸುವಿನ ಯಜ್ಞದ ಮರಣವನ್ನುಕುರಿತು ಮಾತಾಡುವ ವೇಳೆ, "ಆತನು ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿ" ಎಂದು ಹೋಲಿಕೆ ಮಾಡುತ್ತಾನೆ (ಯೆಶಾಯ 53:7). ಸ್ನಾನಿಕನಾದ ಯೋಹಾನನು ಯೇಸುವಿನ ಕಡೆಗೆ ಬೆರಳು ತೋರಿಸಿ ಹೀಗೆ ಹೇಳಿದನು, "ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" (ಯೋಹಾನ 1:29). ನಮಗೆ "ಬಿಡುಗಡೆಯಾದದ್ದು . . . ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ" ಎಂದು ಪೇತ್ರನು ಹೇಳಿದನು (1 ಪೇತ್ರ 1:18, 19).

ಕುರಿಯಾದಾತನು *ನಿಂತಿರುವ*ವನಾಗಿದ್ದನು ಎಂಬುದನ್ನ ಮರೆಯದಿರಿ. ಆತನು ಕೊಯ್ಯಲ್ಪಟ್ಟಿದ್ದನು, ಆದರೆ ಆತನು ಎಬ್ಬಿಸಲ್ಪಟ್ಟವನು ಸಹ ಆಗಿದ್ದನು. ಇದಕ್ಕೆ ಮುಂಚೆ, ಯೇಸುವು ಯೋಹಾನನಿಗೆ "ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ" ಎಂದು ಹೇಳಿದ್ದನು (1:18). ಹೀಗೆ ಆತನು ಸುರುಳಿಯನ್ನು ಬಿಚ್ಚುವದಕ್ಕೆ ಸಿದ್ಧನಾಗಿ ನಿಂತನು.

ನಾವು ಕುರಿಯ ಚಿತ್ರಣವನ್ನು ನೋಡುವಾಗ, ದೇವರ ದಾರಿಗಳು ನಮ್ಮ ದಾರಿಗಳಂತಲ್ಲ ಎಂಬುದು ಮತ್ತೊಂದಾವರ್ತಿ ನಮಗೆ ಜ್ಞಾಪಿಸಲ್ಪಡುತ್ತದೆ (ಯೆಶಾಯ 55:8). ಕೆಟ್ಟತನದ ವಿರುದ್ಧವಾಗಿರುವ ಹೋರಾಟದಲ್ಲಿ, ನಾವು ಬೇರೆಯವರಿಗೆ ಗಾಯವನ್ನುಂಟು ಮಾಡುವ ಸಿಂಹವನ್ನು ಇಷ್ಟಪಡಬಹುದು, ಆದರೆ ದೇವರು ನಮಗೆ "ಬೇರೆಯವರ ನೋವುಗಳನ್ನು ಸ್ವತಃ ತಾನೇ ವಹಿಸಿಕೊಳ್ಳುವ ಒಂದು ಕುರಿಯನ್ನು" ಕೊಡುತ್ತಾನೆ.[8] ನಾವು ಮುಷ್ಟಿಯಾಗಿರುವ ಕೈ ಅಗತ್ಯವಿದೆಯೆಂದು ಯೋಚಿಸಬಹುದು, ಆದರೆ ದೇವರು ತಿವಿಯಲ್ಪಟ್ಟಿರುವ ಕೈ ವಿಜಯವನ್ನು ಗಳಿಸುವದೆಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ಬಯಸುತ್ತಾನೆ.[9]

ಹೇಗೂ, ಕುರಿಯು ನೋಡಿದ ತಕ್ಷಣವೇ ಕಾಣಿಸುವ ರೀತಿಯಲ್ಲಿ ಅಷ್ಟೊಂದು ಅಸಹಾಯಕವಾಗಿರಲಿಲ್ಲ. ಆತನಿಗೆ **ಏಳು ಕೊಂಬುಗಳೂ ಏಳು ಕಣ್ಣುಗಳೂ ಇದ್ದವು; ಅವು ಏನೆಂದರೆ ಭೂಮಿಯ ಮೇಲೆಲ್ಲಾ ಕಳುಹಿಸಲ್ಪಟ್ಟಿರುವ ಏಳು ಆತ್ಮಗಳು** ಎಂದು ಬಣ್ಣಿಸಲಾಗಿರುತ್ತದೆ. ಕೊಂಬುಗಳು ಶಕ್ತಿಯ ಸಂಕೇತವಾಗಿದ್ದವು (ನೋಡಿರಿ ಧರ್ಮೋಪದೇಶಕಾಂಡ 33:17). **ಏಳು ಕೊಂಬುಗಳು** ಕುರಿಯ *ಸರ್ವಶಕ್ತಿಯ* ಕುರಿತು ತಿಳಿಸುವವುಗಳಾಗಿವೆ. ಅಲ್ಲದೆ ಆತನಿಗೆ **ಏಳು ಕಣ್ಣುಗಳೂ** ಇದ್ದವು: ಆತನು ಸಮಸ್ತವನ್ನು ನೋಡುವ, *ಸರ್ವಜ್ಞಾನಿ* (2 ಪೂರ್ವಕಾಲವೃತ್ತಾಂತ 16:9; ಜೆಕರ್ಯ 4:10). ಅಷ್ಟುಮಾತ್ರವಲ್ಲದೆ, ಆತನ ಏಳು ಕಣ್ಣುಗಳು **ದೇವರ ಏಳು ಆತ್ಮಗಳು** ಎಂದು ಗುರುತಿಸಲ್ಪಟ್ಟಿವೆ, ಅದು ಪವಿತ್ರಾತ್ಮನೇ ಎಂಬುದಾಗಿ ನಾವು ಅಭಿಪ್ರಾಯವನ್ನು ತಿಳಿಸಿದ್ದೇವೆ (1:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪವಿತ್ರಾತ್ಮನು ಯೇಸುವಿನ ಕಣ್ಣುಗಳೆಂಬುದಾಗಿ ಹೇಳಲ್ಪಟ್ಟಿರುವ ವಾಸ್ತವಾಂಶವು ದೇವತ್ವದ ಸದಸ್ಯರ ನಡುವಿನ ನಿಕಟ ಸಂಬಂಧವನ್ನು ಸೂಚಿಸಬಹುದಾಗಿದೆ. ಯೇಸುವು ತನ್ನ ಭೂಲೋಕದ ಸೇವೆಯ ವೇಳೆಯಲ್ಲಿ, ಆತನಿಗೆ "ಆತ್ಮ ವರವನ್ನು ಅಳತೆಮಾಡದೆ" ಕೊಡಲಾಗಿತ್ತು (ಯೋಹಾನ 3:34); ಫಿಲಿಪ್ಪಿ 1:19ರಲ್ಲಿ ಪವಿತ್ರಾತ್ಮನು "ಕ್ರಿಸ್ತನ ಹೇರಳವಾಗಿ ದಯಪಾಲಿಸುವ ಆತ್ಮನು" ಎಂದು ಕರೆಯಲ್ಪಟ್ಟಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 16:7). ಭೂಮಿಯ ಮೇಲೆಲ್ಲಾ ಯೇಸುವು "ಏಳು

ಆತ್ಮಗಳನ್ನು" ಕಳುಹಿಸುವದನ್ನು ಪ್ರಸ್ತಾಪಿಸುವದು ಬಹುಶಃ ತನ್ನ ಪವಿತ್ರಾತ್ಮನನ್ನು ಅಪೊಸ್ತಲರಿಗೆ ಕಳುಹಿಸುವದರ ಉಲ್ಲೇಖವಾಗಿರಬಹುದು (ಯೋಹಾನ 14:16, 17, 26; 15:26; 16:7-14; ಅಪೊಸ್ತಲರ ಕೃತ್ಯಗಳು 1:8; 2:1-4, 16, 17, 33; 1 ಕೊರಿಂಥ 2:10), ಹೀಗೆ ಅವರು "ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರುವ" ಮಹಾ ಆದೇಶವನ್ನು ನೆರವೇರಿಸುವದಕ್ಕೆ ಶಕ್ತರಾಗಲಿದ್ದರು (ಮಾರ್ಕ 16:15). ಪವಿತ್ರಾತ್ಮನು ಅಪೊಸ್ತಲರನ್ನು "ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹುನ್ನು ಹುಟ್ಟಿಸುವಂತೆ" ಶಕ್ತಗೊಳಿಸುವವನಾಗಿದ್ದನು (ಯೋಹಾನ 16:8). **ಭೂಮಿಯ ಮೇಲೆಲ್ಲಾ** ಎಂಬುದು ಯೇಸುವು *ಸರ್ವವ್ಯಾಪಿ* ಆಗಿದ್ದನೆಂಬುದನ್ನು ಸೂಚಿಸುತ್ತದೆ. ಕಾಪಾಡಿಕೊಳ್ಳಲಾಗದ ಕುರಿಯಂತೆ ಇರುವದರ ಬದಲಾಗಿ, ಆತನು ವಾಸ್ತವಿಕದಲ್ಲಿ ಪ್ರಾಬಲ್ಯವಿರುವ ಕರ್ತನಾಗಿದ್ದನು (ನೋಡಿರಿ 17:14).

**ವಚನ 7.** ಬಳಿಕ ಯೋಹಾನನು ನೋಡುತ್ತಿರುವಂತೆ, ಕುರಿಯಾದಾತನು **ಮುಂದೆ ಬಂದು ಸಿಂಹಾಸನದ ಮೇಲೆ ಕೂತಿದ್ದಾತನ ಬಲಗೈಯೊಳಗಿಂದ ಆ ಸುರುಳಿಯನ್ನು ತೆಗೆದುಕೊಂಡನು.** ಹೀಗಿರುವದರಿಂದ ಗ್ರೀಕ್ ವಾಕ್ಯವು ಅಕ್ಷರಶಃ "ಆತನು ಬಂದು [ಅದನ್ನು] *ತೆಗೆದುಕೊಂಡಿದ್ದಾನೆ*" ಎಂದು ಹೇಳುತ್ತದೆ (ಒತ್ತಿ ಹೇಳಿದ್ದು ನನ್ನದು); ಕ್ರಿಯಾಪದವಾದ εἴληφεν (*eilēphen,* "ತೆಗೆದುಕೊಂಡಿದ್ದಾನೆ") ಎಂಬುದು λαμβάνω (*lambanō*) ಎಂಬ ಪದದ ಪರಿಪೂರ್ಣಕಾಲ ರೂಪವಾಗಿದೆ. ಈ ಕಾಲರೂಪವು ಸಂಕೇತಿಕರಣಗೊಳಿಸಲ್ಪಟ್ಟಿರುವ ಘಟನೆಯು ವಾಸ್ತವಿಕದಲ್ಲಿ ಗತಕಾಲದೊಳಗೆ ಸಂಭವಿಸಿದ್ದಾಗಿದೆ ಎಂಬುದನ್ನು ಸೂಚಿಸುತ್ತದೆ. ದಾನಿಯೇಲನು ಸಹ "ಮನುಷ್ಯಕುಮಾರನಂತಿರುವವನು" ಮಹಾವೃದ್ಧನನ್ನು ಸಮೀಪಿಸುವ ಕುರಿತಾದ ಇದೇ ರೀತಿಯ ದರ್ಶನವೊಂದನ್ನು ಕಂಡಿದ್ದನು (ದಾನಿಯೇಲ 7:13), ಮತ್ತು ಇದು ಯೇಸುವು ಪರಲೋಕಾರೋಹಣಗೊಂಡ ನಂತರದಲ್ಲಿ ಆತನು ಮಹಿಮೆಗೆ ಸೇರಿಸಲ್ಪಡುವದನ್ನು ಸೂಚಿಸುತ್ತದೆಂಬುದನ್ನು ಬಹುಪಾಲು ವೇದ ಪಂಡಿತರು ಒಪ್ಪಿಕೊಳ್ಳುತ್ತಾರೆ. ಬಹುಶಃ ಪ್ರಕಟನೆ 5:7ನೇ ವಚನವು ಅದೇ ಘಟನೆಯನ್ನು ಸೂಚಿಸಬಹುದಾಗಿದೆ. ಸುರುಳಿಯನ್ನನು ತೆಗೆದುಕೊಳ್ಳುವದು ಮೊದಲನೆಯ ಮುದ್ರೆಯನ್ನು ಒಡೆಯುವದಕ್ಕೆ ವೇದಿಕೆಯನ್ನು ಸಿದ್ಧಪಡಿಸುತ್ತದೆ - ಅದು ಮುಂದಿನ ಅಧ್ಯಾಯದ ಆರಂಭದಲ್ಲಿ ಸಂಭವಿಸುತ್ತದೆ.

**ವಚನ 8.** ಮುದ್ರೆಗಳು ಒಡೆಯಲ್ಪಡುವ ಮುನ್ನ, ಸರ್ವಸೃಷ್ಟಿಯೂ ಒಮ್ಮೆಲೇ ಆರಾಧಿಸುವದಕ್ಕೆ ಆರಂಭಿಸುತ್ತದೆ - 4ನೇ ಅಧ್ಯಾಯದ ಮೊದಲಿನಿಂದ ವೇದಿಕೆಯಲ್ಲಿದ್ದವರ ಸಂಗಡ ಜೊತೆಗೂಡುತ್ತಾರೆ: **ಸುರುಳಿಯನ್ನು ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು.** ಹಿರಿಯರು ಸಿಂಹಾಸನದ ಮೇಲಿದ್ದಾತನನ್ನು ಆರಾಧಿಸುವದಕ್ಕೆ ಅಡ್ಡ ಬೀಳುವ ಪ್ರಕಾರವೇ **ಯಜ್ಞದ ಕುರಿಯಾದಾತನ ಮುಂದೆ ಬಿದ್ದರು** (4:10). ದೇವರೊಬ್ಬನೇ ಆರಾಧಿಸತಕ್ಕವನಾದ್ದರಿಂದ (19:10; 22:8, 9), ಯೇಸುವಿನ ದೈವತ್ವದ ಕುರಿತು ಈ ವಾಕ್ಯಭಾಗವು ಇನ್ನೊಂದು ಪುರಾವೆಯಾಗಿರುತ್ತದೆ.

"ದೇವಮನುಷ್ಯ" ಎಂಬುದಕ್ಕಿರುವ ಗ್ರೀಕ್ ಪದವು ἅγιος (*hagios*) ಎಂಬುದರ ಅರ್ಥವು "ಪರಿಶುದ್ಧನು" ಅಥವಾ "ಪ್ರತ್ಯೇಕಿಸಲ್ಪಟ್ಟವನು" ಎಂದಾಗಿರುತ್ತದೆ. SEB ತರ್ಜುಮೆಯು ಈ ವಾಕ್ಯಭಾಗದಲ್ಲಿ ಈ ಪದದ ಬಹುವಚನದ ರೂಪವನ್ನು "ಪರಿಶುದ್ಧ ಜನರು" ಎಂದು ಅನುವಾದಿಸುತ್ತದೆ. "ದೇವಮನುಷ್ಯ" ಎಂಬ ಪದವು "ಪಾಪರಹಿತ ಮನುಷ್ಯನು" ಎಂಬ

ಅರ್ಥವನ್ನು ಕೊಡು*ವದಿಲ್ಲ.* **ದೇವಜನರು** ಎಂಬುದು ಕ್ರೈಸ್ತರನ್ನು ಸೂಚಿಸುವ ಇನ್ನೊಂದು ಬಿರುದು ಆಗಿರುತ್ತದೆ, ಅದರಲ್ಲಿ ದುರ್ಬಲ ಹಾಗೂ ಪಾಪಭರಿತ ಕ್ರೈಸ್ತರೂ ಸೇರಿದ್ದಾರೆ (ನೋಡಿರಿ 1 ಕೊರಿಂಥ 1:1, 2).

**ವೀಣೆ** ಎಂಬುದನ್ನು ಅನುವಾದಿಸಿರುವ κιθάρα (*kithara*) ಎಂಬ ಗ್ರೀಕ್ ಪದದಿಂದಲೇ "guitar" (ಗೀಟಾರು) ಎಂಬ ಪದವು ಬಂದಿರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ, ಈ ಪದವು "ಒಂದು ತಂತಿವಾದ್ಯ ಅಥವಾ ವೀಣೆನ್ನು ಸೂಚಿಸುವದಾಗಿತ್ತು."[10] ಕೆಲವರು "ಪರಲೋಕದಲ್ಲಿ ವೀಣೆಗಳು ಇರುತ್ತಾವಾದ್ದರಿಂದ" ಕ್ರೈಸ್ತೀಯ ಆರಾಧನೆಗಳಲ್ಲಿ ಸಂಗೀತವಾದ್ಯಗಳನ್ನು ಬಳಸುವದು ಅಂಗೀಕಾರವಾದದ್ದೆಂದು ವಾದಿಸುತ್ತಾರೆ. ಇಲ್ಲಿ ಮತ್ತು 14 ಹಾಗೂ 15 ಅಧ್ಯಾಯಗಳಲ್ಲಿ ಪ್ರಸ್ತಾಪಿಸಲಾಗಿರುವ ವೀಣೆಗಳು ಧೂಪದಂತೆಯೇ ಅಕ್ಷರಶಃ ಆದವುಗಳೇನಲ್ಲ; ಮತ್ತು ಧೂಪದ ಕುರಿತು ಪ್ರಸ್ತಾಪಿಸಿದ್ದರಿಂದ ಕ್ರೈಸ್ತೀಯ ಆರಾಧನೆಗಳಲ್ಲಿ ಧೂಪವನ್ನು ಬಳಸುವದನ್ನು ಹೇಗೆ ಸಮರ್ಥಿಸುವದಿಲ್ಲವೋ ಹಾಗೆಯೇ ವೀಣೆಗಳನ್ನು ಕುರಿತು ಪ್ರಸ್ತಾಪಿಸಿರುವ ಕಾರಣದಿಂದ ಕ್ರೈಸ್ತೀಯ ಆರಾಧನೆಯಲ್ಲಿ ವೀಣೆಗಳನ್ನು ನುಡಿಸುವದನ್ನು ನ್ಯಾಯವೆಂದು ಸಮರ್ಥಿಸುವದಿಲ್ಲ.[11] ಈ ವೀಣೆಗಳು ಸಾಂಕೇತಿಕವಾಗಿದ್ದವು, "ಸ್ತುತಿಯ ಸಂಕೇತ"[12] ಆಗಿದ್ದವು. Henry Swete ಹೀಗೆ ಬರೆದನು, "ಸಭೆಯ ಪ್ರಾರ್ಥನೆಗಳಿಗೆ ಧೂಪವು ಸಂಕೇತಗೊಳಿಸಲ್ಪಟ್ಟಿರುತ್ತದೆ . . . ಅದರ ಸಂಕೀರ್ತನೆಯು [ಕೀರ್ತನೆಗಳ ಹಾಡುವಿಕೆ] . . . ಅದೇ ರೀತಿಯಲ್ಲಿ ವೀಣೆಗಳಿಂದ ಪ್ರತಿನಿಧಿಸಲ್ಪಟ್ಟಿರುತ್ತದೆ."[13] ಧೂಪ ಮತ್ತು ವೀಣೆಗಳ ಸಾಂಕೇತಿಕತೆಯು ನಾಲ್ಕು ಜೀವಿಗಳೂ ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಕರ್ತನನ್ನು ಆರಾಧಿಸುವದಕ್ಕೆ ಸಿದ್ಧರಾಗಿದ್ದರೆಂಬುದನ್ನು ಒತ್ತಿ ಹೇಳುತ್ತದೆ.

**ವಚನ 9.** ಅವರು ಬಲಿಷ್ಠನಾದ ದೇವದೂತನು ಕೇಳಿದ ಪ್ರಶ್ನೆಗೆ ಉತ್ತರಿಸುವದಕ್ಕಾಗಿ ತಮ್ಮ ಸ್ವರಗಳನ್ನೆತ್ತಿದ್ದರು: "ಯಾವನು ಯೋಗ್ಯನು?"

> ಅವರು ಹೊಸ ಹಾಡನ್ನು ಹಾಡುತ್ತಾ - ನೀನು ಸುರುಳಿಯನ್ನು ತೆಗೆದುಕೊಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ.

ದೇವರು ಸೃಷ್ಟಿಕರ್ತನಾಗಿದ್ದರಿಂದ ಆತನನ್ನು ಅವರು ಸ್ತುತಿಸಿದ್ದರು (4:11); ಈಗ ಅವರು ಕುರಿಯಾದಾತನನ್ನು ಸ್ತುತಿಸಿದರು ಯಾಕೆಂದರೆ ಆತನು ವಿಮೋಚಕನಾಗಿದ್ದನು. ಅವರ ಹಾಡು **ಹೊಸ ಹಾಡು** ಆಗಿತ್ತು; ಕುರಿಯಾದಾತನು ಕೊಯ್ಯಲ್ಪಡುವ ಮುನ್ನ, ಅದನ್ನು ಹಾಡುವದಕ್ಕೆ ಸಾಧ್ಯವಿರಲಿಲ್ಲ (14:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮೆಸ್ಸೀಯನು ಬರುವಾಗ ಹಾಡಲ್ಪಡಲಿದ್ದ ಒಂದು "ಹೊಸ ಹಾಡಿನ" ಕುರಿತಾಗಿ ಹಳೆಯ ಒಡಂಬಡಿಕೆಯು ತಿಳಿಸಿತ್ತು (ನೋಡಿರಿ ಯೆಶಾಯ 42:8-10). ಪರಲೋಕದ ಗಾಯಕರು ಮೊದಲು *ವಿಮೋಚನೆಯ ಕಾರಣಕ್ಕಾಗಿ* ಹಾಡಿದರು: **ನೀನು ಯಜ್ಞಾರ್ಪಿತನಾಗಿ . . . ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ.** ನಾವು "ಕ್ರಯಕ್ಕೆ ಕೊಳ್ಳಲ್ಪಟ್ಟವರು" ಆಗಿದ್ದೇವೆ (1 ಕೊರಿಂಥ 7:23; ನೋಡಿರಿ 1 ಕೊರಿಂಥ 6:19, 20), ಮತ್ತು ಆ ಕ್ರಯವು ಯೇಸುವಿನ ಅಮೂಲ್ಯ ರಕ್ತವೇ (ಅಪೊಸ್ತಲರ ಕೃತ್ಯಗಳು 20:28).

ಅಲ್ಲದೆ ಅವರು *ವಿಮೋಚನೆಯ ವ್ಯಾಪ್ತಿಯನ್ನು* ಕುರಿತು ಸಹ ಹಾಡಿದರು: **ಸಕಲ ಕುಲ ಭಾಷೆ ಪ್ರಜೆ ಜನಾಂಗಗಳು.** ನಾಲ್ಕು ಪದಗಳು ಬಳಸಲ್ಪಟ್ಟಿವೆ -ಮತ್ತು ನಾಲ್ಕು ಬ್ರಹ್ಮಾಂಡ ಸಂಖ್ಯೆಯಾಗಿದೆ, ಸೃಷ್ಟಿಯ ಸಂಖ್ಯೆಯಾಗಿದೆ. "ಕುಲ" ಎಂಬುದು ಸಕಲ ಕುಟುಂಬದ ಗುಂಪನ್ನು ಸೂಚಿಸುತ್ತದೆ, "ಭಾಷೆ" ಪ್ರತಿಯೊಂದು ಭಾಷೆಯ ಗುಂಪನ್ನು ಸೂಚಿಸುತ್ತದೆ, "ಪ್ರಜೆ" ಎಂಬುದು

ಸಕಲ ಸಾಮಾಜಿಕ ಗುಂಪು, ಮತ್ತು "ಜನಾಂಗ" ಎಂಬುದು ಪ್ರತಿಯೊಂದ ಜನಾಂಗೀಯ ಗುಂಪನ್ನು ಸೂಚಿಸುತ್ತದೆ. ಯೇಸುವು "*ಎಲ್ಲರಿ*ಗೋಸ್ಕರ ಸತ್ತನು" (2 ಕೊರಿಂಥ 5:15; ಒತ್ತಿ ಹೇಳಿದ್ದು ನನ್ನದು). "ಕುಲ ಭಾಷೆ ಪ್ರಜೆ ಜನಾಂಗಗಳು" ಎಂಬ ಪದಗುಚ್ಛವು ಪ್ರಕಟನೆ ಪುಸ್ತಕದಲ್ಲಿ ಎಲ್ಲಾ ಮಾನವರನ್ನು ಕುರಿತು ಮಾತಾಡಲು ಬಳಸಲ್ಪಟ್ಟಿರುತ್ತದೆ (ನೋಡಿರಿ 7:9; 11:9; 13:7; 14:6). ಪ್ರತಿ ಸಾರಿಯೂ ಒಂದು ಬೇರೆ ಬೇರೆಯಾದ ಕ್ರಮಾನುಸಾರವಾಗಿ ಹೇಳಲ್ಪಟ್ಟಿರುತ್ತದೆ, ಇದು ಈ ಪುಸ್ತಕದ ಕ್ಲಿಷ್ಟಕರ ರಚನೆಗೆ ಮತ್ತೊಂದು ಉದಾಹರಣೆಯಾಗಿದೆ.

**ವಚನ 10.** ಬಳಿಕ ಅವರು *ವಿಮೋಚನೆಯ ಫಲಿತ* ದ ಕುರಿತು ಹಾಡುತ್ತಾರೆ: **ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು** (1:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅನೇಕ ಪ್ರಾಚೀನ ಹಸ್ತಪ್ರತಿಗಳು ಇಲ್ಲಿ ಉತ್ತಮ ಪುರುಷ ಬಳಕೆ ಮಾಡುತ್ತವೆ: "ನೀನು . . . *ನಮ್ಮ*ನ್ನು ಮಾಡಿದಿ; *ನಾವು* . . . ಆಳುವೆವು." ಕೆಲವು ವೇದ ಪಂಡಿತರು ಸನ್ನಿವೇಶವನ್ನು ನೋಡಿದರೆ ಇಲ್ಲಿ ಪ್ರಥಮ ಪುರುಷಕ್ಕಿಂತಲೂ ಉತ್ತಮ ಪುರುಷ ಸೂಕ್ತವೆಂದು ಕಾಣಿಸುತ್ತದೆಂದು ನಂಬುತ್ತಾರೆ. ಕ್ರಿಸ್ತನ ಮೂಲಕವಾಗಿ, ನಾವು ವಿಶೇಷ ಜನರಾಗುತ್ತೇವೆ: "ನೀವಾದರೋ . . . ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" (1 ಪೇತ್ರ 2:9).

ಒಂದು ಕ್ಷಣ **ಅವರು ಭೂಮಿಯ ಮೇಲೆ ಆಳುವರು** ಎಂಬ ಆಶ್ಚರ್ಯವಾದ ಹೇಳಿಕೆಯನ್ನು ಆಲೋಚಿಸಿಕೊಳ್ಳಿರಿ. ಕ್ರೈಸ್ತರು ಯಾವ ಅರ್ಥದಲ್ಲಿ "ಭೂಮಿಯ ಮೇಲೆ ಆಳುವರು," ಮತ್ತು ಈ ದಿನ ನಾವು ಯಾವ ಅರ್ಥದಲ್ಲಿ "ಭೂಮಿಯ ಮೇಲೆ ಆಳುವೆವು"? ಯೋಹಾನನ ದಿನದಲ್ಲಿ, ಕ್ರೈಸ್ತರು ಸೆರೆಮನೆಗೆ ಹಾಕಲ್ಪಟ್ಟು ಸಿಂಹಗಳಿಗೆ ಆಹಾರವಾಗಿ ಕೊಡಲ್ಪಡುತ್ತಿರುವ ವೇಳೆ, ಅವರು ಆಳುತ್ತಿರುವರೆಂದು ಖಂಡಿತವಾಗಿಯೂ ಕಾಣಿಸಲಿಲ್ಲ. ಇಂದು, ಸಮಸ್ಯೆಗಳಲ್ಲಿ ಸಿಲುಕಿಕೊಂಡು ಒದ್ದಾಡುತ್ತಿರುವ ವೇಳೆ, ನಾವು ಆಳುತ್ತಿರುವೆವೆಂಬುದಾಗಿ *ಕಾಣಿಸದೆ ಇರಬಹುದು.* ಹೇಗೂ ಮೇಲಿನ ತೋರಿಕೆಗಳು ಮೋಸಕರವಾಗಿರಬಲ್ಲವು. ಮೊದಲ ಶತಮಾನದ ಅಲ್ಲೋಲಕಲ್ಲೋಲ ಪರಿಸ್ಥಿತಿಯಲ್ಲಿ, ನಿಶ್ಚಯವಾಗಿಯೂ ದೇವರು ಇನ್ನು ಮೇಲೆ ಸಿಂಹಾಸನದಲ್ಲಿರುವದಿಲ್ಲವೆನೋ ಎಂದು ತೋರಿರಬಹುದಾಗಿದೆ, ಆದರೆ ಆತನು ಸಿಂಹಾಸನದಲ್ಲಿಯೇ ಇದ್ದಾನೆಂಬ ಭರವಸವನ್ನು 4ನೇ ಅಧ್ಯಾಯವು ಕ್ರೈಸ್ತರಿಗೆ ನೀಡುತ್ತದೆ. ಆದದರಿಂದ, ನಾವು ಹೀಗೆ ಕೇಳುತ್ತೇವೆ, "ಕ್ರೈಸ್ತರು ಯಾವ ಅರ್ಥದಲ್ಲಿ ಭೂಮಿಯ ಮೇಲೆ ಆಳಿದರು – ಮತ್ತು ಆಳುವರು?"

ಕ್ರೈಸ್ತರಾಗಿ, ನಾವು ಹಲವಾರು ವಿಧಗಳಲ್ಲಿ ಆಳ್ವಿಕೆ ಮಾಡುತ್ತೇವೆ: (1) ನಾವು ಕ್ರಿಸ್ತನ ರಾಜ್ಯವಾಗಿದ್ದೇವೆ (ಪ್ರಕಟನೆ 1:6), ಅದು ಸಭೆಯೇ (ಮತ್ತಾಯ 16:18, 19). (2) ದೇವರು ನಮ್ಮ ತಂದೆಯಾಗಿರುವದರಿಂದ (1 ಕೊರಿಂಥ 1:3), ನಾವು ರಾಜವಂಶಸ್ಥ ಕುಟುಂಬದ ಭಾಗವಾಗಿದ್ದೇವೆ. (3) ಈಗ ಸದ್ಯಕ್ಕೆ ಆಳ್ವಿಕೆ ಮಾಡುತ್ತಿರುವದರಿಂದ (ಅಪೊಸ್ತಲರ ಕೃತ್ಯಗಳು 2:33–36; 1 ಕೊರಿಂಥ 15:25) ಮತ್ತು ನಾವು "ಕ್ರಿಸ್ತನಲ್ಲಿ" ಇದ್ದೇವಾದ್ದರಿಂದ (2 ಕೊರಿಂಥ 5:17), ನಾವು ಆತನ ಆಳ್ವಿಕೆಯಲ್ಲಿ ಪಾಲುಗಾರರಾಗಿದ್ದೇವೆ. (4) ನಾವು ರಕ್ಷಿಸಲ್ಪಟ್ಟಿದ್ದೇವಾದ್ದರಿಂದ, ಇನ್ನು ಮೇಲೆ ಮರಣವು ನಮ್ಮ ಮೇಲೆ ಆಳ್ವಿಕೆ ಮಾಡುವದಿಲ್ಲ; ಬದಲಾಗಿ ನಮಗೆ "ಯೇಸು ಕ್ರಿಸ್ತನೆಂಬ ಆ ಒಬ್ಬ ಪುರುಷನ ಮೂಲಕ ಜೀವಭರಿತವಾಗಿ ಆಳುವ" ಶಕ್ತಿಯು ಕೊಡಲ್ಪಟ್ಟಿದೆ (ರೋಮಾ 5:17; ನೋಡಿರಿ ರೋಮಾ 5:14, 21).

ಯೋಹಾನನ ದಿನದ ಕ್ರೈಸ್ತರ ದೃಷ್ಟಿಕೋನದಿಂದ ನೋಡುವದಾದರೆ, "ಭೂಮಿಯ ಮೇಲೆ ಆಳುವರು" ಎಂಬ ಮಾತುಗಳು ಬಹುಶಃ ಪ್ರಾಥಮಿಕವಾಗಿ *ವಿಜಯ*ವನ್ನು

ಸೂಚಿಸುವವುಗಳಾಗಿದ್ದವು. ರೋಮನ್ ಸಾಮ್ರಾಜ್ಯವು ಕ್ರೈಸ್ತರ ಮೇಲೆ ಆಳ್ವಿಕೆ ಮಾಡಲು ಪ್ರಯತ್ನಿಸುತ್ತಾ ಕೈಸರನನ್ನು ಆರಾಧಿಸುವಂತೆ ಅವರನ್ನು ಒತ್ತಾಯಿಸಿತು, ಆದರೆ ಕ್ರಿಸ್ತನ ಬಲದ ಮೂಲಕವಾಗಿ, ಕ್ರೈಸ್ತರು ತಮ್ಮ ಜೀವಿತಗಳ ಹಾಗೂ ಅಂತ್ಯಾವಸ್ಥೆಗಳ ಮೇಲೆ ನಿಯಂತ್ರಣವನ್ನು ಕಾಪಾಡಿಕೊಂಡರು. ಅದೇ ರೀತಿಯಲ್ಲಿಯೇ, ನಾವು ನಮ್ಮ ಜೀವಿತಗಳನ್ನು ಕರ್ತನಿಗೆ ಒಪ್ಪಿಸಿಕೊಳ್ಳುವಾಗ, ಜೀವಿತವು ನಮ್ಮ ದಾರಿಯಲ್ಲು ಹಾಕುವ ಪ್ರತಿಯೊಂದು ಅಡೆತಡೆಯ "ಮೇಲೆ ಆಳುವವರಾಗಿ" ಜಯಭರಿತವಾದ ಜೀವಿತಗಳನ್ನು ನಡಿಸುವಂತೆ ಆತನು ನಮಗೆ ಸಹಾಯವನ್ನು ಮಾಡುವನು.

ಸಹಸ್ರವರ್ಷಪೂರ್ವಾಡಳಿತ ಲೇಖಕರಿಗಾದರೋ, "ಅವರು . . . ಆಳು*ವರು*" ಎಂಬುದರಲ್ಲಿ ಭವಿಷ್ಯತ್ಕಾಲರೂಪದ ಬಳಕೆಯು ಭೂಮಿಯ ಮೇಲೆ ಕ್ರಿಸ್ತನು ಭವಿಷ್ಯದಲ್ಲಿ ಆಳುವನೆಂಬುದಕ್ಕೆ ಪುರಾವೆಯಾಗಿದ್ದು, ಆ ಕಾಲದಲ್ಲಿ, ಅವರ ಸಿದ್ಧಾಂತದ ಪ್ರಕಾರ, ಕ್ರೈಸ್ತರು ಆತನ ಸಂಗಡ ಆಳ್ವಿಕೆ ಮಾಡುವರು. ಇಲ್ಲಿ ಕೆಲವೊಂದು ವ್ಯಾಖ್ಯಾನಗಳು ಸೂಕ್ತವಾಗಿರುತ್ತವೆ: (1) ಈ ವಾಕ್ಯಭಾಗದಲ್ಲಿ ಗ್ರಂಥಪಾಠದ ಸಮಸ್ಯೆಗಳು ಉದ್ಭವವಾಗುತ್ತವೆ, ಮತ್ತು ಇದನ್ನು ವರ್ತಮಾನಕಾಲರೂಪದಲ್ಲಿ ಓದುವದು ಸರಿಯಾದದ್ದೋ ಅಥವಾ ಭವಿಷ್ಯತ್ಕಾಲರೂಪದಲ್ಲಿ ಓದುವದು ಸರಿಯಾದದ್ದೋ ಎಂಬ ವಿಷಯದಲ್ಲಿ ಪಂಡಿತರಲ್ಲಿಯೇ ಭಿನ್ನಾಭಿಪ್ರಾಯಗಳಿರುತ್ತವೆ. ಉದಾಹರಣೆಗೆ, NASBಯಲ್ಲಿ ಭವಿಷ್ಯತ್ಕಾಲರೂಪವು ಇದ್ದರೆ, ಅದರ ಮುಂಚಿನ ತರ್ಜುಮೆಯು (ASV) ವರ್ತಮಾನಕಾಲರೂಪವನ್ನು ಬಳಸಿರುತ್ತದೆ. (2) ಭವಿಷ್ಯತ್ಕಾಲವು ಸರಿಯಾದದ್ದೇ ಎಂದುಕೊಂಡಾಗ್ಯೂ, ಕ್ರೈಸ್ತರು ಈಗ ಸದ್ಯದಲ್ಲಿ ಆಳ್ವಿಕೆ ಮಾಡುತ್ತಿಲ್ಲ ಎಂಬುದನ್ನು ಇದು ಸಾಭಿತುಗೊಳಿಸುವದಿಲ್ಲ. G. B. Cairdನು ಗಮನಕ್ಕೆ ತರುವದೇನೆಂದರೆ, "ಕ್ರೈಸ್ತರ ಆಳ್ವಿಕೆಯು ಅಂತಿಮವಾದ ಭವಿಷ್ಯತ್ಕಾಲಕ್ಕೆ ಸೇರಿದ್ದಾಗಿದೆ ಎಂದು ಹೇಳುವ ಯಾವದೇ ಅಭಿಪ್ರಾಯವು . . . ಪಕ್ಕಕ್ಕಿಡತಕ್ಕದ್ದಾಗಿದೆ, ಯಾಕೆಂದರೆ ಅವರು ಈಗಾಗಲೇ ರಾಜರೂ ಯಾಜಕರೂ ಆಗಿದ್ದಾರೆಂಬುದಾಗಿ ಎರಡು ಸಾರಿ ನಮಗೆ ಹೇಳಲ್ಪಟ್ಟಿರುತ್ತದೆ."[14] Jim McGuigganನು 20:6ರಲ್ಲಿ ಕ್ರೈಸ್ತರು *ಯಾಜಕರು* ಎಂಬ ವಿಷಯವಾಗಿ ಭವಿಷ್ಯತ್ಕಾಲರೂಪವು ಬಳಸಲ್ಪಟ್ಟಿದೆ ಎಂಬುದನ್ನು ಗಮನಕ್ಕೆ ತಂದು ಹೀಗೆ ಹೇಳುತ್ತಾನೆ, "ಅದರರ್ಥವು ಅವರು ಈಗಾಗಲೇ ಯಾಜಕರಾಗಿರಲಿಲ್ಲ ಎಂದಾಗುತ್ತದೋ? ಖಂಡಿತವಾಗಿಯೂ ಇಲ್ಲ. ಅದು ಕೇವಲ ಮರಣವಾಗಲಿ ಅಥವಾ ಹಿಂಸೆಯಾಗಲಿ ಯೇಸುವಿನ ಸಂಗಡವಿರುವ ಅವರ ಸಂಬಂಧವನ್ನು ಕಡಿದು ಹಾಕುವದಕ್ಕೆ ಸಾಧ್ಯವಿಲ್ಲ ಎಂಬ ಭರವಸನ್ನಷ್ಟೆ ಕ್ರೈಸ್ತರಿಗೆ ಯೋಹಾನನು ಕೊಡುತ್ತಿರುವದಾಗಿದೆ."[15] (3) ನಂಬಿಗಸ್ತರಾದ ಕ್ರೈಸ್ತರು ಈಗಾಗಲೇ *ವರ್ತಮಾನಕಾಲದಲ್ಲಿ* ಆಳ್ವಿಕೆ ಮಾಡುತ್ತಿರುವರೆಂದು (1:5, 6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಅವರು ಮರಣದ ಬಳಿಕ ನ್ಯಾಯತೀರ್ಪಿಗಾಗಿ ಕಾಯುತ್ತಿರುವ ವೇಳೆ *ನಿರಂತರವಾಗಿ* ಆಳ್ವಿಕೆಯನ್ನು ಮಾಡುವರು (20:4-6), ಮತ್ತು ಕರ್ತನ ಸಂಗಡ *ನಿತ್ಯತ್ವದುದ್ದಕ್ಕೂ* ಆಳುವರು (22:5) ಎಂದು ಪ್ರಕಟನೆ ಪುಸ್ತಕವು ಕಲಿಸುತ್ತದೆ.

## ಕುರಿಯಾದಾತನಿಗೆ ಸ್ತೋತ್ರವಾಗಲಿ (5:11-14)

**11ಇದಲ್ಲದೆ ಸಿಂಹಾಸನವು ಜೀವಿಗಳು ಹಿರಿಯರು ಇವರ ಸುತ್ತಲು ಬಹುಮಂದಿ ದೇವದೂತರನ್ನು ಕಂಡೆನು; ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು. 12ಅವರ ಸ್ವರವು ನನಗೆ ಕೇಳಿಸಿತು; ಅವರು ಮಹಾ ಶಬ್ದದಿಂದ - ವಧಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ**

**ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು [13]ಎಂದು ಹೇಳಿದರು. ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ ಇರುವದೆಲ್ಲವೂ - ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾ ತನಿಗೂ ಸ್ತೋತ್ರ ಮಾನ ಪ್ರಭಾವ ಆದಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ [14]ಎಂದು ಹೇಳುವದನ್ನು ಕೇಳಿದೆನು. ಆಗ ನಾಲ್ಕು ಜೀವಿಗಳು ಆಮೆನ್ ಅಂದವು; ಮತ್ತು ಹಿರಿಯರು ಅಡ್ಡಬಿದ್ದು ನಮಸ್ಕಾರ ಮಾಡಿದರು.**

**ವಚನ 11.** ಇಪ್ಪತ್ತೆಂಟು ಗಾಯಕರು ವಿಮೋಚನೆಯ ಗೀತೆಯನ್ನು ಹಾಡಿದ ಬಳಿಕ, ಅವರೊಂದಿಗೆ ದೇವದೂತರು ಸೇರಿ ಪಲ್ಲವಿಯನ್ನು ಹಾಡುತ್ತಾರೆ. ಯೋಹಾನನು ಹೀಗೆ ಹೇಳುತ್ತಾನೆ, **ಇದಲ್ಲದೆ ಸಿಂಹಾಸನವು ಜೀವಿಗಳು ಹಿರಿಯರು ಇವರ ಸುತ್ತಲು ಬಹುಮಂದಿ ದೇವದೂತರನ್ನು ಕಂಡೆನು; ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು.** ಕೋಟ್ಯಾನುಕೋಟಿ (**Myriads**) ಎಂಬುದು μυριάδες (*muriades*, ಇದು μυριάς, *murias* ಎಂಬದರಿಂದ ಬಂದದ್ದು) ಎಂಬ ಪದದ ಲಿಪ್ಯಂತರಣವಾಗಿರುತ್ತದೆ, ಅದರ ಅರ್ಥವು "ಹತ್ತು ಸಾವಿರ" ಅಥವಾ "ಅಸಂಖ್ಯಾತ ಸಾವಿರಗಳಷ್ಟು" ಎಂದಾಗಬಲ್ಲದು. "ಕೋಟ್ಯಾನುಕೋಟಿ" ಎಂಬುದರ ಬದಲಾಗಿ KJVಯಲ್ಲಿ "ಹತ್ತು ಸಾವಿರ ಪಟ್ಟು ಹತ್ತು ಸಾವಿರರಷ್ಟು" ಎಂದಿರುತ್ತದೆ. ಈ ಅಂಕಿಅಂಶಗಳನ್ನು ಬಳಸಿಕೊಂಡು ಪರಲೋಕದಲ್ಲಿ ದೇವದೂತರ ಸಂಖ್ಯೆಯು ಎಷ್ಟೆಂದು ಲೆಕ್ಕ ಮಾಡುವದಕ್ಕೆ ಪ್ರಯತ್ನಿಸದಿರಿ. "ಹತ್ತು" ಸಂಪೂರ್ಣತೆಯನ್ನು ಸೂಚಿಸುವಂಥ ಅಂಕಿಯಾಗಿರುತ್ತದೆ. "ಹತ್ತು" ಅಂಕಿಯನ್ನು ಅಷ್ಟೊಂದು ಅದ್ದೂರಿಯಾಗಿ ಗುಣಕಾರ ಮಾಡುವದು ಪರಲೋಕದಲ್ಲಿ ಪ್ರತಿಯೊಬ್ಬ ದೇವದೂತನು ಹಾಜರಿದ್ದನೆಂಬುದನ್ನಷ್ಟೆ ಸೂಚಿಸುವದಾಗಿದೆ.

**ವಚನ 12.** ಈ "ಕೋಟ್ಯಾನುಕೋಟಿ ದೇವದೂತರು" (ಇಬ್ರಿಯ 12:22; KJV) ತಮ್ಮ ಸ್ವರಗಳನ್ನು ಹಿರಿಯರು ಮತ್ತು ಜೀವಿಗಳ ಜೊತೆಯಲ್ಲಿಯೂ ಜೊತೆಗೂಡಿಸಿದರು. ಈ ಹಾಡು "ಒಮ್ಮತದ ಹಾಡು" ಎಂದು ಕರೆಯಲ್ಪಟ್ಟಿದೆ. ಕೆಲವರು "ಬೈಬಲ್ ದೇವದೂತರು ಹಾಡುವದರ ಕುರಿತು ಮಾತಾಡುವದೇ ಇಲ್ಲ" ಎಂದು ಬೋಧಿಸಿದಾಗ್ಯೂ ನಾವು "ಅವರ ಹಾಡು" ಎಂದು ಹೇಳುವದಕ್ಕೆ ಸಂಕೋಚ ಪಡುವದಿಲ್ಲ. ಈ ನಿಲುವನ್ನು ಹೊಂದಿರುವವರು 12ನೇ ವಚನವು **ಹೇಳಿದರು** ಎಂಬ ಪದವನ್ನು ಬಳಸುತ್ತದೆಂಬ ವಾಸ್ತವಾಂಶವನ್ನು ಎತ್ತಿ ತೋರಿಸುತ್ತಾರೆ. ಇಲ್ಲಿ ಎರಡು ಸಂಗತಿಗಳನ್ನು ಗಮನಕ್ಕೆ ತರುವದು ಸೂಕ್ತವಾಗಿರುತ್ತದೆ: (1) ಏನನ್ನಾದರೂ "ಹೇಳುವದು" ಮತ್ತು "ಹಾಡುವದು" ಇವುಗಳ ನಡುವೆ ಅಷ್ಟೇನೂ ವ್ಯತ್ಯಾಸವಿರುವದಿಲ್ಲ - ಕೇವಲ ಸ್ವರದಲ್ಲಿ ಮತ್ತು ಲಯದಲ್ಲಿ ಏರೀಳಿತ ಇರುತ್ತದಷ್ಟೆ, ಇವುಗಳು ಕೆಲವು ವಿಧವಾದ ಗಾಯನಗಳಲ್ಲಿ ಅನುಪಸ್ಥಿತ ಸಹ ಆಗಿರುತ್ತವೆ. (2) 9ನೇ ವಚನದಲ್ಲಿ, "ಹಾಡಿದರು" ಮತ್ತು "ಹೇಳಿದರು" ಎಂಬ ಪದಗಳು ಪರ್ಯಾಯವಾಗಿ ಬಳಸಲ್ಪಟ್ಟಿವೆ: "ಅವರು ಹೊಸ ಹಾಡನ್ನು ***ಹಾಡುತ್ತಾ*** . . . ***ಹೇಳಿದರು***" (ಒತ್ತಿ ಹೇಳಿದ್ದು ನನ್ನದು).

ಯೇಸುವು ದೇವದೂತರಿಗಾಗಿ ಅಲ್ಲ, ಆದರೆ ಮಾನವರಿಗಾಗಿ ಮರಣಿಸಿದನಾದರೂ, ದೇವದೂತರು ದೇವರ ಜನರ ರಕ್ಷಣೆಯಲ್ಲಿ ನಿರಾಸಕ್ತಿ ಹೊಂದಿರುತ್ತಾರೆಂಬುದು ಅದರರ್ಥವಾಗಿರುವದಿಲ್ಲ (ಲೂಕ 15:10). ದೇವದೂತರು ಆದಿಯಿಂದಲೂ ದೇವರ ರಕ್ಷಣಾ ಯೋಜನೆಯನ್ನು ಜಾರಿಗೆ ತರುವದರಲ್ಲಿ ಭಾಗಿಯಾಗಿರುತ್ತಾರೆ (ನೋಡಿರಿ ಮತ್ತಾಯ 1:20; 4:11; 24:31; 28:2; ಲೂಕ 1:11, 26; 2:9-14; 16:22; ಯೋಹಾನ 20:12; ಅಪೊಸ್ತಲರ ಕೃತ್ಯಗಳು 8:26; 10:3; 1 ಪೇತ್ರ 1:12). 12ನೇ ವಚನದಲ್ಲಿ ಅವರು ಆ ಯೋಜನೆಯಲ್ಲಿ

ಯೇಸುವಿನ ಪಾತ್ರಕ್ಕಾಗಿ ಆತನನ್ನು ಸ್ತುತಿಸಿದರು: **ವಧಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು.**

ನಾಲ್ಕು ದೈವಿಕ ಗುಣಗಳು ಪ್ರಸ್ತಾಪಿಸಲ್ಪಟ್ಟಿರುತ್ತವೆ ಜೊತೆಗೆ ಮೂರು ಭಕ್ತಿಪೂರ್ವಕ ಮನೋಭಾವಗಳು ಪ್ರಸ್ತಾಪಿಸಲ್ಪಟ್ಟಿವೆ - ಒಟ್ಟು ಏಳು ಆಗಿದ್ದು ಯೇಸುವಿನ ಪರಿಪೂರ್ಣತೆಯನ್ನು ಒತ್ತಿ ಹೇಳುತ್ತದೆ. ಗ್ರೀಕ್ ವಾಕ್ಯದಲ್ಲಿ, ಏಳು ಗುಣಗಳ ಪಟ್ಟಿಯೊಂದಿಗೆ ಕೇವಲ ಒಂದೇ ನಿರ್ದಿಷ್ಟ ಗುಣವಾಚಿ (“the”) ಬಳಸಲ್ಪಟ್ಟಿದ್ದು, ಏಳನ್ನು ಒಂದು ಸಮಗ್ರ ಸಂಗತಿಯಾಗಿ ತೆಗೆದುಕೊಳ್ಳತಕ್ಕದ್ದೆಂಬುದನ್ನು ಸೂಚಿಸುತ್ತದೆ. ಪಟ್ಟಿಯಲ್ಲಿರುವ ಪ್ರತಿಯೊಂದು ಅಂಶವು ಹೊಸ ಒಡಂಬಡಿಕೆಯೊಳಗೆ ಬೇರೊಂದು ಕಡೆಯಲ್ಲಿ ಯೇಸುವಿಗೆ ಎಣಿಸಲಾಗಿರುತ್ತದೆ. 4:11ರಲ್ಲಿ ದೇವರಿಗೆ ಎಣಿಸಲಾಗಿರುವ ಪ್ರತಿಯೊಂದು ಗುಣವು ಇಲ್ಲಿ ಕುರಿಯಾದಾತನಿಗೆ ಹೊರಿಸಲಾಗಿರುತ್ತದೆ - ಇದು ಯೇಸುವಿನ ದೇವತ್ವಕ್ಕೆ ಮತ್ತೊಂದು ಪುರಾವೆಯಾಗಿದೆ.

ಹಲವಾರು ಗುಣಗಳ ಕುರಿತು ವ್ಯಾಖ್ಯಾನಿಸುವದು ಇಲ್ಲಿ ಸಮಂಜಸವಾಗಿರುವದು. **ಸಾಮರ್ಥ್ಯ**ವು ಅಥವಾ “ಶಕ್ತಿ” (ἰσχύς, *ischus*) ಯು **ಬಲ** (δύναμις, *dunamis*) ಗಳಿಗಿಂತ ವ್ಯತ್ಯಾಸವಾಗಿದ್ದು ಅದು ಬಲದ *ಒಂದು ವ್ಯಕ್ತಗೊಳಿಸುವಿಕೆ* ಆಗಿರುತ್ತದೆ. ಬಲವನ್ನು ಹೊಂದಿದ್ದೂ ಅದನ್ನು ಬಳಸದೆ ಇರುವದು ಸಾಧ್ಯವಿರುತ್ತದೆ. **ಪ್ರಭಾವ** ಎಂಬ ಪದವನ್ನು ಅನುವಾದಿಸಿರುವ ಪದವು δόξα (*doxa*), ಈ ಪದದಿಂದಲೇ “doxology” ಎಂಬ ಪದವು ಬಂದಿರುತ್ತದೆ, ಅದರರ್ಥವು “ಸ್ತುತಿ ವಾಕ್ಯ” ಎಂದಾಗಿದೆ. “Doxology” ಯು ಸಾಮಾನ್ಯವಾಗಿ ದೇವರ ಮಹಿಮೆಯನ್ನು ಸ್ತುತಿಸಿ ಹೊಗಳುವಂಥ ಹಾಡೊಂದನ್ನು ಸೂಚಿಸುತ್ತದೆ. **ಸ್ತೋತ್ರ** (ಆಶೀರ್ವಾದ) ಎಂಬ ಪದವನ್ನು ಅನುವಾದಿಸಿರುವ εὐλογία (*eulogia*) ಎಂಬ ಗ್ರೀಕ್ ಪದದಿಂದಲೇ “eulogy” ಎಂಬ ಪದವು ಬಂದಿದ್ದು, ಅದರರ್ಥವು “ಒಂದು ಪ್ರಶಂಸೆಯ ಮಾಡತು” ಎಂದಾಗಿರುತ್ತದೆ. *Eulogia* ಎಂಬ ಪದವು ಸ್ತೋತ್ರ ಮಾಡುವದು ಅಥವಾ ಆಶೀರ್ವದಿಸುವದು ಇವೆರಡರಲ್ಲೊಂದನ್ನು ಸೂಚಿಸಬಲ್ಲದಾದ್ದರಿಂದ, ಕೆಲವು ತರ್ಜುಮೆಗಳು ಇಲ್ಲಿ “ಸ್ತೋತ್ರ” ಎಂದು ಅನುವಾದಿಸುತ್ತವೆ.

**ವಚನ 13.** ಆ ಸಂದರ್ಭದಲ್ಲಿ, ಸಕಲ ಸೃಷ್ಟಿಯು ಜೊತೆಗೂಡಿ ಸ್ತುತಿಯ ಗೀತೆಯನ್ನು ಹಾಡುವರು: **ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ ಇರುವದೆಲ್ಲವೂ.** ಈ ಕಾವ್ಯಾತ್ಮಕ ಭಾಷೆಯು *ಎಲ್ಲೆಲ್ಲಿಯೂ ಇರುವ ಎಲ್ಲವೂ* ತಮ್ಮ ಸ್ವರವನ್ನೆತ್ತಿದವು ಎಂಬುದನ್ನು ಒತ್ತಿ ಹೇಳುತ್ತದೆ. ನಾವು ಕರ್ತನಿಗೆ ಸ್ತೋತ್ರಗಳನ್ನು ಹಾಡುವಾಗ, ನಮ್ಮ ಹೃದಯಗಳು ಮತ್ತು ಸ್ವರಗಳು ಆತನನ್ನು ಪ್ರೀತಿಸಿ ಆತನನ್ನು ಪ್ರಶಂಸಿಸುವ ಪರಲೋಕ ಹಾಗೂ ಭೂಮಿಯ ಮೇಲೆ ಇರುವ ಎಲ್ಲರ ಸ್ವರಗಳೊಂದಿಗೆ ಒಂದುಗೂಡುತ್ತವೆಂಬುದನ್ನು ಈ ವಾಕ್ಯಭಾಗವು ನಮಗೆ ತಿಳಿಯ ಪಡಿಸುತ್ತದೆ. ನಿಮ್ಮದು “ಇಬ್ಬರು ಮೂವರು . . . ಕೂಡಿ ಬಂದಿರುವ” ಸಭೆಯಾಗಿದ್ದರೂ (ಮತ್ತಾಯ 18:20), ನೀವು ವಿಶ್ವದಲ್ಲಿಯೇ ಅತ್ಯಂಥ ಮಹತ್ವಪೂರ್ಣವಾದ ಒಕ್ಕೊರಲಿನ ಪಲ್ಲವಿಯ ಭಾಗವಾಗಿರುವಿರಿ.

4ನೇ ಅಧ್ಯಾಯದಲ್ಲಿ ದೇವರನ್ನುದ್ದೇಶಿಸಿ ಎರಡು ಹಾಡುಗಳು ಮತ್ತು 5ನೇ ಅಧ್ಯಾಯದಲ್ಲಿ ಯೇಸುವನ್ನುದ್ದೇಶಿಸಿ ಎರಡು ಹಾಡುಗಳು ಹಾಡಲ್ಪಡುತ್ತವೆ. ಈ ಹಾಡು ಎರಡು ಅಧ್ಯಾಯಗಳಲ್ಲಿ ಐದನೆಯದ್ದಾಗಿರುತ್ತದೆ, ಮತ್ತು ಇದು ದೇವರು ಹಾಗೂ ಯೇಸು *ಇಬ್ಬರನ್ನೂ* ಗುರಿಮಾಡಿ ಹಾಡಲಾಗಿರುತ್ತದೆ: **ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ.** ಗ್ರೀಕ್

ವಾಕ್ಯದೊಳಗೆ ಈ ಪಟ್ಟಿಯಲ್ಲಿರುವ ನಾಲ್ಕರಲ್ಲಿ ಪ್ರತಿಯೊಂದು ಪದಕ್ಕೆ ಮುಂಚೆ ನಿರ್ದಿಷ್ಟ ಗುಣವಾಚಿ ("the") ಇರುತ್ತದೆ, ಇದು ದೇವರು ಮತ್ತು ಯೇಸು ಮಾತ್ರವೇ ಸ್ತೋತ್ರಕ್ಕೆ ಯೋಗ್ಯರೆಂಬುದನ್ನು ಸೂಚಿಸುತ್ತದೆ (4:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಆಧಿಪತ್ಯ** ಎಂಬುದನ್ನು ಅನುವಾದಿಸಿರುವ κράτος (*kratos*) ಎಂಬ ಗ್ರೀಕ್ ಪದವು 12ನೇ ವಚನದಲ್ಲಿ "ಬಲ" ಮತ್ತು "ಸಾಮರ್ಥ್ಯ" ಎಂಬ ಪದಗಳನ್ನು ಅನುವಾದಿಸಿರುವ ಪದದ ರೀತಿಯಲ್ಲಿಯೇ ಇರುತ್ತದೆ. ಇದು ಬಲವನ್ನು *ನಿರಂತರವಾಗಿ ಚಲಾಯಿಸುತ್ತಿರುವದನ್ನು* ಸೂಚಿಸುತ್ತದೆ.

**ವಚನ 14.** ಒಕ್ಕೊರಲಿನ ಸ್ವರವು ಸ್ತೋತ್ರಗಳನ್ನು ಹಾಡುತ್ತಿರುವ ಹಾಗೆ, **ನಾಲ್ಕು ಜೀವಿಗಳು "ಆಮೆನ್"** ***ಅಂದವು*** (ಒತ್ತಿ ಹೇಳಿದ್ದು ನನ್ನದು). ಸಕಲ ಸೃಷ್ಟಿಯು "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ" ಎಂದು ಹೇಳಿತು, ಮತ್ತು ಜೀವಿಗಳು "ಆಮೆನ್!" ಎಂದವು. ಅವರು "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಮಾನ" ಉಂಟಾಗಲಿ ಎಂದು ಹಾಡಿದರು, ಮತ್ತು ಜೀವಿಗಳು "ಆಮೆನ್!" ಅಂದವು. ಅವರು "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಪ್ರಭಾವ" ಎಂದು ಘೋಷಿಸಿದವು, ಮತ್ತು ಜೀವಿಗಳು "ಆಮೆನ್!" ಎಂದು ಹೇಳಿದವು. ಅವರು "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಆಧಿಪತ್ಯ ಯುಗಯುಗಾಂತರಗಳಲ್ಲಿಯೂ ಇರಲಿ" ಎಂದು ಕೂಗಿದವು, ಮತ್ತು ಜೀವಿಗಳು "ಆಮೆನ್!" ಎಂದು ಹೇಳಿದವು. "ಯೆಹೋವನಿಗೆ ಸದಾಕಾಲವೂ ಕೊಂಡಾಟವಾಗಲಿ. ಆಮೆನ್, ಆಮೆನ್" (ಕೀರ್ತನೆ 89:52).

ಹಾಡು ಮುಕ್ತಾಯಗೊಳ್ಳುತ್ತಿದ್ದ ಹಾಗೆ, ಈ ಮುಂಚೆ ಮಾಡಿದ್ದ ಪ್ರಕಾರವೇ **ಹಿರಿಯರು ಅಡ್ಡಬಿದ್ದು ನಮಸ್ಕಾರ ಮಾಡಿದರು** (4:10; 5:8). "ಯೆಹೋವನು ತನ್ನ ಪರಿಶುದ್ಧ ಮಂದಿರದಲ್ಲಿದ್ದಾನೆ; ಭೂಲೋಕವೆಲ್ಲಾ ಆತನ ಮುಂದೆ ಮೌನವಾಗಿರಲಿ" (ಹಬಕ್ಕೂಕ 2:20).

# ಅನ್ವಯಿಸುವಿಕೆ

## ಕುರಿಯಾದಾತನ ಕುರಿತ ಪಾಠಗಳು (ಅಧ್ಯಾಯ 5)

ಪ್ರಕಟನೆ 5ನೇ ಅಧ್ಯಾಯದ ಮೇಲಿನ ಬಹುಪಾಲು ಪ್ರಸಂಗಗಳು ಯೇಸುವಿನ ಸುತ್ತ ಕೇಂದ್ರಿಕೃತವಾಗಿರುತ್ತವೆ, ಅದೇ ರೀತಿಯಲ್ಲಿಯೇ ಅಧ್ಯಾಯವು ಸಹ ಇರುತ್ತದೆ. ಈ ಅಧ್ಯಾಯದ ಸರಳವಾದ ವಿಭಜನೆಯು ಹೇಗಿರುವದೆಂದರೆ (1) ವಿಮೋಚಕನನ್ನು ಹುಡುಕಿದ್ದು (ವಚನಗಳು 1-4), (2) ವಿಮೋಚಕನು ಬಣ್ಣಿಸಲ್ಪಟ್ಟಿದ್ದು (ವಚನಗಳು 5-7), (3) ವಿಮೋಚಕನು ಸ್ತುತಿಸಲ್ಪಟ್ಟಿದ್ದು (ವಚನಗಳು 8-14).

Merrill C. Tenneyನು ಈ ಅಧ್ಯಾಯಕ್ಕೆ "ಕುರಿಯಾದಾತನು ಮತ್ತು ಸುರುಳಿ" ಎಂಬ ಶಿರ್ಷಿಕೆಯನ್ನಿಟ್ಟನು ಮತ್ತು ಈ ಸಂಕ್ಷಿಪ್ತ ವಿವರಣೆಯನ್ನು ಸಲಹೆ ಮಾಡುತ್ತಾನೆ: (1) ಸಮಸ್ಯೆಯು ವ್ಯಕ್ತಗೊಂಡಿದ್ದು (ವಚನಗಳು 1-4), (2) ವ್ಯಕ್ತಿಯು ಘನ ಪಡಿಸಲ್ಪಟ್ಟಿದ್ದು (ವಚನಗಳು 5-7), (3) ಸ್ತುತಿಗಳು ವ್ಯಕ್ತಗೊಳಿಸಲ್ಪಟ್ಟಿದ್ದು (8-14).[16]

Warren Wiersbeನು ಮುಂದಿಟ್ಟ "ವಿಮೋಚಕನನ್ನು ಆರಾಧಿಸಿರಿ" ಎಂಬ ನಿರೂಪಣೆಯಲ್ಲಿ ಆತನು 1ರಿಂದ 4 ವಚನಗಳನ್ನು ತನ್ನ ಪರಿಚಯ ಭಾಗದಲ್ಲಿ ವಿವರಿಸುತ್ತಾನೆ ಮತ್ತು ಬಳಿಕ ಉಳಿದ ವಚನಗಳನ್ನು ಸಂಕ್ಷಿಪ್ತ ವಿವರಣೆಯಲ್ಲಿ ಸೇರ್ಪಡೆಗೊಳಿಸುತ್ತಾನೆ: (1) ಆತನು ಯಾರಾಗಿದ್ದಾನೆಂಬುದಕ್ಕಾಗಿ ಆರಾಧಿಸಿರಿ (ವಚನಗಳು 5-7), (2) ಆತನು ಎಲ್ಲಿದ್ದಾನೆಂಬ ಕಾರಣಕ್ಕಾಗಿ ಆರಾಧಿಸಿರಿ (ವ. 6), (3) ಆತನು ಏನು ಮಾಡುತ್ತಾನೆಂಬ

ಕಾರಣಕ್ಕಾಗಿ ಆರಾಧಿಸಿರಿ (ವಚನಗಳು 8-10), (4) ಆತನು ಏನು ಹೊಂದಿದ್ದಾನೆಂಬ ಕಾರಣಕ್ಕಾಗಿ ಆರಾಧಿಸಿರಿ (ವಚನಗಳು 11-14). ಅಲ್ಲದೆ Wiersbeನು ಈ ಹೆಚ್ಚು ಸಾಮಾನ್ಯವಾದ ಸಂಕ್ಷಿಪ್ತ ವಿವರಣೆಯನ್ನು ಸಹ ಮುಂದಿಟ್ಟನು: (1) ಮುದ್ರೆ ಹಾಕಲ್ಪಟ್ಟ ಸುರುಳಿ (ವಷನಗಳು 1-5), (2) ಕೊಯ್ಯಲ್ಪಟ್ಟ ಕುರಿಯಾದಾತನು (ವಚನಗಳು 6-10), (3) ಅರ್ಭಟಿಸುವ ಸಮೂಹಗಳು (ವಚನಗಳು 11-14).[17]

ಯೇಸುವಿನ ಸುತ್ತ ಕೇಂದ್ರಕೃತವಾದ ಇನ್ನೊಂದು ವಿಧವೆಂದರೆ ಅಧ್ಯಾಯ 5ರಲ್ಲಿನ *ಹಾಡುಗಳ* ಮೇಲೆ ಪ್ರಸಂಗಿಸುವದೇ. ಈ ಪ್ರಸಂಗಕ್ಕೆ "ಸ್ತುತಿಗೆ ಯೋಗ್ಯನು ನಮ್ಮ ವಿಮೋಚಕನಾದ ಕ್ರಿಸ್ತನೇ" ಎಂಬ ಶಿರ್ಷಿಕೆಯನ್ನು ಕೊಡಬಹುದು. ಈ ಪ್ರಸಂಗದಲ್ಲಿ ಕ್ರಿಸ್ತನ ಜೀವಿತದ ದೃಷ್ಟಾಂತಗಳನ್ನು ಹೆಣೆಯಬಹುದಾಗಿದೆ.

ನೀವು ಇದು ವರೆಗೂ "ಯಾರೂ ಮಾಡಿರದ ಕಾರ್ಯವನ್ನು" ಮಾಡಬೇಕೆಂದರೆ ನಿಮ್ಮ ಸಂಕ್ಷಿಪ್ತ ವಿವರಣೆಗಳಲ್ಲಿ ಯೋಹಾನನ ಕಣ್ಣೀರನ್ನು ಸೇರ್ಪಡೆಗೊಳಿಸಿರಿ (ವ. 4): "ದೇವರು ಎಲ್ಲಾ ಕಣ್ಣೀರನ್ನು ಒರೆಸಿ ಬಿಡುವನು." ಅಂತಹ ಒಂದು ಪ್ರಸಂಗವು (1) ಯೋಹಾನನು ಏಕೆ ಅತ್ತನು ಮತ್ತು ನಾವು ಏಕೆ ಅಳುತ್ತೇವೆ, ಮತ್ತು (2) ದೇವರು ಹೇಗೆ ಯೋಹಾನನ ಕಣ್ಣೀರನ್ನು ಒರೆಸಿದನು ಮತ್ತು ನಮ್ಮ ಕಣ್ಣೀರನ್ನು ಹೇಗೆ ಒರೆಸುತ್ತಾನೆ ಎಂಬ ಅಂಶಗಳನ್ನು ಒತ್ತಿ ಹೇಳಬಹುದಾಗಿದೆ.

## ಹುರುಪಿನಿಂದ ಹಾಡುವದು (ಅಧ್ಯಾಯ 5)

Bruce Metzger ಹೀಗೆ ಹೇಳಿದನು,

> ಮತ್ತು ಅದೇ ರೀತಿಯಲ್ಲಿ ಮುಂದಿನ ಅಧ್ಯಾಯಗಳಲ್ಲಿ ಬಣ್ಣಿಸಲಾಗಿರುವ ಭಯಂಕರ ಸಂಗತಿಗಳು ಲೋಕದ ಮೇಲೆ ಹರಿಯ ಬಿಡಲ್ಪಡುವದಕ್ಕಿದ್ದಾಗ್ಯೂ, ಯೋಹಾನನು ದೃಢವಿಶ್ವಾಸದಿಂದ ಸಹಿಸಿಕೊಳ್ಳುವದಕ್ಕೆ ಶಕ್ತನಾಗುವಂತೆ ಸರ್ವಶಕ್ತನಾದ ದೇವರ ಹಾಗೂ ಕುರಿಯಾದಾತನ ಒಳ್ಳೇತನ ಮತ್ತು ಕರುಣೆಯ ಮಹಿಮಕರವಾದ ಈ ದೃಢಪಡಿಸುವಿಕೆಗಳು ಆತನ ಕಿವಿಗಳಲ್ಲಿ ಮೊಳಗುತ್ತಿದ್ದವು.[18]

Jim McGuigganನು ವಾದಿಸುವದೇನೆಂದರೆ "ನಾನು ಮತ್ತು ನೀನು ನಾವು ಹಾಡುವ ಹಾಡುಗಳಲ್ಲಿರುವ ಅರ್ಧದಷ್ಟನ್ನಾದರೂ ನಂಬುವದಾದರೆ, ಕ್ರಿಸ್ತನು ನಮ್ಮ ಜೀವಿತಗಳಲ್ಲಿ ಮತ್ತು ಸಮಸ್ಯೆಗಳನ್ನು ನಾವು ಹೇಗೆ ಎದುರಿಸುತ್ತೇವೆ ಎಂಬುದರಲ್ಲಿ ಒಂದು ವ್ಯತ್ಯಾಸವನ್ನು ಮಾಡ*ತಕ್ಕದ್ದು*."[19]

ನೀವು ಪ್ರಕಟನೆ 5ರಲ್ಲಿ ವ್ಯಕ್ತಪಡಿಸಲಾಗಿರುವ ವಿಮೋಚನೆಯ ಕುರಿತ ಶ್ರೇಷ್ಠ ಸತ್ಯಗಳನ್ನು ನಂಬುತ್ತೀರೋ? ನೀವು ನಂಬುವದಾದರೆ, ನಿಮಗೋಸ್ಕರ "ವಧಿತನಾದ ಕುರಿಯಾದಾತನಿಗೆ" ನಿಮ್ಮನ್ನು ಅರ್ಪಿಸಿಕೊಳ್ಳುವಿರೆಂದು ನಾವು ಪ್ರಾರ್ಥಿಸುತ್ತೇವೆ. ಆತನಿಗೆ ನಿಮ್ಮನ್ನು ಸಮರ್ಪಿಸಿಕೊಳ್ಳುವದರಿಂದ ಈ ಜೀವಿತದಲ್ಲಿ ನಿಮಗೆ ಆಶೀರ್ವಾದ ಉಂಟಾಗುವದು; ಬಳಿಕ ನೀವು ಒಂದು ದಿನ ಬಲವಾದ ಒಂದು ಒಕ್ಕೊರಲಿನ ವೃಂದದೊಂದಿಗೆ ನಿಂತು "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ"! ಎಂದು ಹಾಡುವಿರಿ.

## "ಒಂದು ಅಳುವ ಕಾಲ" (5:4)

ಪಾಪದಲ್ಲಿ ಕಳೆದು ಹೋಗಿರುವ ಲೋಕದಲ್ಲಿ ನಮ್ಮನ್ನು ಕುರಿತು ಯೋಚಿಸಿಕೊಳ್ಳುವಾಗ,

ಸರಿಯಾಗಿರುವದನ್ನು ಮಾಡುವದಕ್ಕೆ ಪ್ರಯತ್ನಿಸುವವರು ಅನುಭವಿಸುತ್ತಿರುವ ಬಾಧೆಗಳನ್ನು ನೋಡುವ ವೇಳೆ, ಯೋಹಾನನಿಗಿದ್ದ ಅಷ್ಟೇ ತೀಕ್ಷ್ಣವಾದ ಕಳಕಳಿಯು ನಮಗೆ ಇರುತ್ತದೋ (ವ. 4)? ನಾವು ಕೆಲವು ಸಾರಿ ತೋರ್ಪಡಿಸುವ ಕಳಕಳಿಯ ಕೊರತೆಯು ಈ ಶಿರ್ಷಿಕೆಯ ಪ್ರಸಂಗದಲ್ಲಿ ಸೆರೆ ಹಿಡಿಯಲ್ಪಟ್ಟಿದೆ: "ನರಕದ ಕಡೆಗೆ ಸಾಗುತ್ತಿರುವ ಲೋಕವೊಂದರಲ್ಲಿರುವ ಕಣ್ಣೀರು ಬತ್ತಿರುವ ಒಂದು ಸಭೆ." ವೃದ್ಧನಾಗಿರುವ ಯೋಹಾನನು ಅಳುತ್ತಿರುವದನ್ನು ನೋಡಿರಿ ಮತ್ತು ಕೆಲವು ವಿಷಯಗಳು ಬೇಸರಗೊಳ್ಳುವದಕ್ಕೆ ಯೋಗ್ಯವಾದವುಗಳೆಂಬುದನ್ನು ತಿಳಿದುಕೊಳ್ಳಿರಿ (ನೋಡಿರಿ ಯೋವೇಲ 2:12; ಮಾರ್ಕ 14:72; ಫಿಲಿಪ್ಪಿ 3:18). ಬಹಳಷ್ಟು ಸಾರಿ ನಾವು ಕ್ಷುಲ್ಲಕ ವಿಚಾರಗಳಿಗಾಗಿ ಅಳುತ್ತೇವೆ ಮತ್ತು ನಿತ್ಯವಾದ ಪರಿಣಾಮಗಳನ್ನು ಹೊಂದಿರುವ ವಿಷಯಗಳಲ್ಲಿ ನಮ್ಮ ಮನಸ್ಸನ್ನು ಸ್ವಲ್ಪವೂ ಕದಲಿಸದವರಾಗಿ ಉಳಿಯುತ್ತೇವೆ. ಒಂದು "ಅಳುವ ಸಮಯವು" ಇರುತ್ತದೆ (ಪ್ರಸಂಗಿ 3:4).

### ಕುರಿಯಾದಾತನ ರಕ್ತ (5:9)

ಕೆಲ ಕಾಲದ ಹಿಂದೆ, ಒಂದು ಕ್ರೈಸ್ತ ಪಂಗಡವಿದ್ದು ಅದು ತನ್ನ ಸದಸ್ಯರು "ರಕ್ತ" ಎಂಬ ಪದವನ್ನು "ಅಸಹ್ಯಕರ" ಎಂದು ಎಣಿಸಿದ್ದರಿಂದ ತಮ್ಮ ಹಾಡುಗಳ ಪುಸ್ತಕದಿಂದ ಆ ಪದವನ್ನು ತೆಗೆದು ಹಾಕಿತು. ಆ ಹಾಡಿನ ಪುಸ್ತಕವನ್ನು ಇನ್ನೆಂದಿಗೂ ಪರಲೋಕದಲ್ಲಿ ಬಳಸಲ್ಪಡುವದಕ್ಕೆ ಸಾಧ್ಯವಿರುವದಿಲ್ಲ, ಯಾಕೆಂದರೆ ಪರಲೋಕದಲ್ಲಿ ರಕ್ಷಣೆಯನ್ನು ಉಂಟು ಮಾಡುವ ಕುರಿಯಾದಾತನ ರಕ್ತದ ಕುರಿತು ಹಾಡುತ್ತಾರೆ: "ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ" (ವ. 9).

---

### ಅಡಿಟಿಪ್ಪಣಿಗಳು


[1]Merrill C. Tenney, ರಿಂದ ಉಲ್ಲೇಖಿಸಲ್ಪಟ್ಟದ್ದು Warren W. Wiersbe in *The Bible Exposition Commentary*, vol. 2 (Wheaton, Ill.: Victor Books, 1989), 566. [2]Ray Summers, *Worthy Is the Lamb* (Nashville: Broadman Press, 1951), viii. [3]See Frank Pack, *Revelation*, Part 1 (Austin, Tex.: R. B. Sweet Co., 1965), 55–56. [4]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 28. [5]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 584 (ಒತ್ತಿ ಹೇಳಿದ್ದು ಆತನದ್ದು). [6]Jimmy Adcox, "Victory Through Surrender," *Vision of Victory: The Book of Revelation* (Searcy, Ark.: Harding University, 1992), 89. [7]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 342 (emphasis added). [8]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 52. [9]Adapted from Adcox, 89. [10]Vine, 527.


[11]ನೋಡಿರಿ Eddie Cloer, "'Hallelujah!'" Truth for Today 19 (December 1998): 42–44. [12]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 61. [13]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 80. [14]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 77. [15]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 93. [16]Tenney, 25–29.

[17]Warren W. Wiersbe, *Wiersbe's Expository Outlines on the New Testament* (Wheaton, Ill.: Victor Books, 1992), 809–12. [18]Metzger, 54. [19]McGuiggan, 90 (ಒತ್ತಿ ಹೇಳಿದ್ದು ನನ್ನದು).

# ಅನುಬಂಧ 1

ಹೆರೋದನ ದೇವಾಲಯ






ಆಸ್ಯ ಸೀಮೆಯ ಏಳು ಸಭೆಗಳು & ಪತ್ಮೋಸ್ ದ್ವೀಪ




ಸುಮಾರು ಕ್ರಿ.ಶ 100ರ ಹೊತ್ತಿನ ರೋಮನ್ ಸಾಮ್ರಾಜ್ಯ

# ಅನುಬಂಧ 2

ಈ ಕೆಳಗಿನ ದೃಷ್ಟಾಂತಗಳು ಚಿತ್ರಕಲಾಕಾರ Brian Wattsನಿಂದ ಪ್ರತ್ಯೇಕವಾಗಿ ಟ್ರುತ್ ಫಾರ್ ಟುಡೇಗೋಸ್ಕರವೇ ಬಿಡಿಸಲ್ಪಟ್ಟಿದ್ದು ಯೋಹಾನನ ದರ್ಶನಗಳಲ್ಲಿ ಸಂಭವಿಸುವ ಘಟನೆಗಳನ್ನು ಪ್ರತಿನಿಧಿಸುತ್ತವೆ (ಪ್ರಕಟನೆ 1—11). ಯೋಹಾನನು ಕಂಡ ಸಂಗತಿಗಳನ್ನು ಕಲ್ಪಿಸಿಕೊಳ್ಳುವಂತೆ ವಾಚಕನಿಗೆ ಸಹಾಯವನ್ನು ಒದಗಿಸಲು ಮತ್ತು ಪ್ರಕಟನೆ ಪುಸ್ತಕವನ್ನು ಉಪದೇಶಿಸುವದರಲ್ಲಿ ಶಿಕ್ಷಕನಿಗೆ ಸಹಾಯವನ್ನು ನೀಡುವ ಉದ್ದೇಶಕ್ಕಾಗಿ ಸೇರ್ಪಡೆಗೊಳಿಸಲ್ಪಟ್ಟಿವೆ. ದೃಶ್ಯಾತ್ಮಕ ಸಹಾಯಗಳಾಗಿ ಬಳಸುವದಕ್ಕೆ ಈ ಚಿತ್ರಗಳನ್ನು ನಕಲು ಮಾಡಬಹುದಾಗಿದೆ. ಹೇಗೂ, ಅವುಗಳನ್ನು ಮರುಮಾರಾಟ ಮಾಡತಕ್ಕದ್ದಲ್ಲ.




ಪತ್ಮೋಸ್ ದ್ವೀಪದಲ್ಲಿ ಯೋಹಾನನು (1:9)




**ಸಭೆಗಳ ಮಧ್ಯದಲ್ಲಿ ಕ್ರಿಸ್ತನು (1:12-16)**



ಸಿಂಹಾಸನದ ಸುತ್ತಲು ಇದ್ದ ನಾಲ್ಕು ಜೀವಿಗಳು (4:5--8)




ಇಪ್ಪತ್ತುನಾಲ್ಕು ಹಿರಿಯರು ಜೊತೆಗೂಡಿ ಸ್ತುತಿಸುತ್ತಾರೆ (4:9-11)



ಒಬ್ಬ ಹಿರಿಯನು ಸಿಂಹಾಸನದ ಮುಂದೆ ಅಡ್ಡಬೀಳುತ್ತಿರುವದು (4:10)



**ಏಳು ಮುದ್ರೆಗಳುಳ್ಳ ಸುರುಳಿ (5:1)**



**ಕೊಯ್ಯಲ್ಪಟ್ಟ ಕುರಿಯಾದಾತನು (5:6)**



ಸುರುಳಿಯನ್ನು ಬಿಚ್ಚುವದಕ್ಕೆ
ಕುರಿಯಾದಾತನು ಯೋಗ್ಯನು (5:7–10)